Licence No. 60.
licenced to Post without Prepayment

Reg. No. M. 1550.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೩೦ | ತಾರೀಕು ೫–೧೦–೧೯೫೦ನೇ ಶುಕ್ರವಾರ | ಸಂಚಿಕೆ ೧೯

ಹೈದರಾಬಾದಿನ ಸಮಸ್ಯೆ ಮತ್ತು ಭವಿತವ್ಯ.

ಲೇ:—ಸ್ವಾಮಿ ರಮಾನಂದತೀರ್ಥ.

ಹೈದರಾಬಾದ ಸಮಸ್ಯೆಯು ಇನ್ನೂ ಮುಂದುವರಿಯುತ್ತಲೇ ಇದ್ದು ಜನರ ಲಕ್ಷವು ಅತ್ತ ವೇಧಿಸಲ್ಪಡುತ್ತಿದೆಯಲ್ಲದೆ, ಭಾರತೀಯರ ಮನಸ್ಸಿನಲ್ಲಿ ಆ ಬಗ್ಗೆ ಒಂದು ವಿಚಿತ್ರ ಆಸ್ಥೆಯನ್ನು ಉತ್ಪನ್ನಮಾಡತ್ತಲಿದೆ. ಬ್ರಿಟಿಷರ ಆಳಿಕೆಯ ಕಾಲದಲ್ಲಿ ಸಾಮ್ರಾಜ್ಯವಾದೀ ತಂತ್ರ ಮಂತ್ರಗಳಿಗೆ ಅಹೊಂದು ತಳಹದಿಯ ಸ್ಥಾನದಲಿತ್ತು. ಬ್ರಿಟಿಷ್ ಆಸ್ಥೆಯನ್ನು ಶಂರಕ್ಷಿಸುವ ಹಾಗೂ ಅದನ್ನು ಮುಂದುವರಿಸುವ ಕಾರ್ಯದಲ್ಲಿ ದೇಶದ ದಾರುಣಯೋಗವನ್ನು ಮೂಡಿಕೊಳ್ಳುತ್ತ ನಾಡಿನ ಕೇಡಿನಲ್ಲಿ ಅಹು ಮುಂದುವರಿಯುತ್ತಿತ್ತು. ಭಾರತದಲ್ಲಿ ಬ್ರಿಟಿಷ ಸಾಮ್ರಾಜ್ಯದ ಹಂಚಿಕೆ ಹೈದರಾಬಾದನೇ ಮೇಟಿಯಾಗಿತ್ತೆಂಬುದು ಸುಪ್ರಸಿದ್ಧವಾದ ಮಾತೇ ಆಗಿರುತ್ತದೆ. ಹೈದರಾಬಾದಿನ ಅಡಳಿತಗಾರರಿಗೆ ಇದ್ದ ಬಿರುದು ಬಾವಲಿಗಳೂ, ವಿಶೇಷ ರೀತಿಯ ಸಾಲಭ್ಯಗಳೂ ಇದಕ್ಕೆ ಸಾಕ್ಷಿ.

ಭಾರತದ ಜಾತೀಯ ರಾಜಕಾರಣದಲ್ಲಿ ಮುಸ್ಲಿಂ ಲೀಗಿನ ಬೆಳೆವಣಿಗೆಯ ಬೇರುಗಳು ಹೈದರಾಬಾದಲ್ಲಿ ಹುಟ್ಟಿ ಬೆಳೆದುಬಲು ನೀರುಸಲ್ಪಡುತ್ತಿದ್ದವಲ್ಲದೆ, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದ ಮುನ್ನಡೆಯನ್ನು ತಡೆಯುವ ಪ್ರಯತ್ನಗಳೂ ಇಲ್ಲಿಂದಲೇ ನಡೆಯುತ್ತಿದ್ದವು. ಈ ಪರಿಣಾಮವಾಗಿ, ಭಾರತವು ಸ್ವತಂತ್ರವಾದ ಬಳಿಕ, ಹಾಗೂ ಜಾತೀಯ ತಳಹದಿಯ ಮೇಲೆ ದೇಶವು ಇಬ್ಭಾಗವಾದ ಬಳಿಕ, ಹೈದರಾಬಾದದಲ್ಲಿ ಮುಸ್ಲಿಂ ಜಾತೀಯತೆಯು ನಗ್ನ ನೃತ್ಯವನ್ನು ನಡೆಸಿ ಹೈದರಾಬಾದವನ್ನು ಸ್ವತಂತ್ರ ಸಾರ್ವಭೌಮ ರಾಜ್ಯವನ್ನಾಗಿ ಮಾಡಲು ಪ್ರಯತ್ನಿಸಿತು. ಹೈದರಾಬಾದದಲ್ಲಿ ಆಗ ಅಧಿಕಾರ ಹಾಗೂ ಪಾಕಿಸ್ತಾನೀ ಒಲವಿನ ಜನತಾ ವಿಭಾಗಗಳು ಗಂಡಾಂತರ ಪರಿಸ್ಥಿತಿಯನ್ನು ತಂದೊಡ್ಡಿದವು. ಈ ಆಹ್ವಾನವನ್ನು ಸ್ವೀಕರಿಸಿ ಹೈದರಾಬಾದ ಸಂಸ್ಥಾನ ಕಾಂಗ್ರೆಸ್ಸು ಆದನ್ನ ಭಾರತದ ಒಂದು ಭಾಗವನ್ನಾಗಿ ಮಾಡಲು ತುಂಬಾ ಹೋರಾಡಿತು. ಈ ಹೋರಾಟವೇ ಪೊಲೀಸ ಕ್ರಿಯೆಗಿಳಿದು ಕೊನೆಗೆ ಹೈದರಾಬಾದವು ಭಾರತದ ಒಂದು ಭಾಗವಾಯಿತು.

ಪ್ರಕ್ಷುಬ್ಧ ಪರಿಸ್ಥಿತಿಯನ್ನು ಮನಗಂಡು ಹೈದರಾಬಾದದಲ್ಲಿ ಪೊಲೀಸ ಅಡಳಿತವು ಆರಂಭವಾಯಿತು. ಆಗಿನ ಅಸಾಮಾನ್ಯ ಪರಿಸ್ಥಿತಿಗೆ ಅದು ಬೇಕಾಗಿತ್ತು. ಪರಿಸ್ಥಿತಿ ಹಿಡಿತದಲ್ಲಿ ಬಂದು ವಾತಾವರಣವು ತಿಳಿಯಾಗಲು ಅನುಕೂಲವಾಗುವುದೆಂದು ಜನತೆ ಈ ಪೊಲೀಸರ ಅಡಳಿತದ ಕಡೆಗೆ ಆಶಾಪೂರಿತವಾಗಿ ನೋಡುತ್ತಿತ್ತು. ಪೋಲೀಸ ಅಡಳಿತವಾಹರೂ ತನ್ನ ಸಾಮರ್ಥ್ಯದಿಂದ ಪರಿಸ್ಥಿತಿಯನ್ನು ಹಿಡಿತದಲ್ಲಿ ತಂದು ವಾತಾವರಣವನ್ನು ತಿಳಿಮಾಡಿತು.

ಪೊಲೀಸ್ ಅಡಳಿತವು, ಏನೇ ಆದರೂ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಅಸ್ತಿತ್ವದಲ್ಲಿರುವ ಪ್ರಾಸಂಗಿಕ ಅಡಳಿತ ಮಾತ್ರವಾಗಿರುತ್ತವೆ. ಪ್ರಕ್ಷುಬ್ಧತೆ ಇಳಿದು ವಾತಾವರಣವು ತಿಳಿಯಾದ ಬಳಿಕ ನಾಗರಿಕ ಅಡಳಿತೆಗೆ ಅದು ಸ್ಥಾನಬಿಟ್ಟು ಕೊಡಬೇಕು. ಆದರೆ ಹೈದರಾಬಾದದಲ್ಲಿ ಹಾಗೆ ಆಗಲಿಲ್ಲ. ಹದಿನೈದು ತಿಂಗಳುಗಳ ಪರೆಗೆ ಈ ಪೊಲೀಸ್ ಅಡಳಿತವು ಸಾಗಿತು. ಈ ಸಂದರ್ಭದಲ್ಲಿ ಸಂಸ್ಥಾನದ ಅಥವಾ ಜನತೆಯ ಜಗೆ ಜಗೆಯ ಸಮಸ್ಯೆಗಳ ಪರಿಹಾರ ಕಾರ್ಯವು ಅಷ್ಟೊಂದು ಯಶಸ್ವಿಯಾಗಿ ನಡೆಯಲಿಲ್ಲ. ಶಾಂತಿ ಸುವ್ಯವಸ್ಥೆಗಳ ನಿರ್ಮಾಣವು ತಕ್ಕಮಟ್ಟಿಗೆ ಸರಿಯಾಗಿ ಆಗಿದ್ದರೂ ಉಳಿದ ವಿಷಯಗಳ ಬಗ್ಗೆ ಎಷ್ಟು ಬೇಕಿತ್ತೋ ಅಷ್ಟು ಗಮನವು ದೊರೆಯಲಿಲ್ಲ. ಆಗಿನ ಪೊಲೀಸ್ ಅಡಳಿತವು ವಿಲಕ್ಷಣ ರೀತಿಯದಾಗಿತ್ತೆಂದೂ ಜನತೆಯು ಸಮಗ್ರ ಜೀವನದ ಕಡೆಗೆ ಅದು ನೋಡದ ಪರಿಸ್ಥಿತಿಯಲ್ಲಿತ್ತೆಂದೂ ಈಗ ಹೇಳಬಹುದಾಗಿದೆ. ಜನತೆಯ ಸ್ಥಿತಿ ಹಿಂದೆ ಹೇಗಿತ್ತೋ ಹಾಗೆಯೇ ಉಳಿದಿರುವುದು. ಈ ಬಗ್ಗೆ ಯಾರನ್ನು ದೂಷಿಸಬೇಕು? ಎಂಬ ಪ್ರಶ್ನೆ ಏನಿಲ್ಲ. ಆದರೆ ಪೊಲೀಸ್ ಅಡಳಿತವು ಬೇಗನೆ ವಜಾಗಿದು ನಾಗರೀಕ ಅಡಳಿತಕ್ಕೆ ಅನುವು ದೊರೆಯಬೇಕಾಗಿತ್ತು. ಅಷಾಗದ್ದರಿಂದ ಜನತೆಗೆ ತೊಂದರೆಯಾಯಿತು. ಈ ಬಗ್ಗೆ ಅನೇಕರದು ಭಿನ್ನಾಭಿಪ್ರಾಯವಿದ್ದರೂ ಹೈದರಾಬಾದದಲ್ಲಿಯು ಅನೇಕರು ಇದಕ್ಕೊಪ್ಪಿದ್ದಾರೆ.

ಪೊಲೀಸು ಅಡಳಿತವು ಕೊನೆಗೊಂಡು ನಾಗರಿಕ ಅಡಳಿತವು ಬಂದು ಹಲವು ಸ್ಥಿತ್ಯಂತರಗಳಾದವು. ಆದರೆ ಸಂಪೂರ್ಣ ಜನಪ್ರತಿನಿಧ್ಯದ ಸರಕಾರವಾಗಬೇಕೆಂಬುದಕ್ಕೆ ಅನೇಕ ಕಾರಣಗಳನ್ನು ಮುಂದೆಮಾಡಿ ಅದನ್ನು ಹಿಂದೂಡಲಾಯಿತು. ಕಮ್ಯೂನಿಸ್ಟ್ ತೊಂದರೆಯೂ ಹೀಗೆ ಹೇಳಲಾದ ಕಾರಣಗಳಲ್ಲಿ ಒಂದಾಗಿರುತ್ತದೆ. ಸರಿಯಾದ ವಾತಾವರಣವು ಇಲ್ಲವಾಗಿಲ್ಲವೆಂದು ಇನ್ನೊಂದು ಕಾರಣವೂ ಹೇಳಲ್ಪಡುತ್ತದೆ ಸ್ಥಳೀಯ ಕಾಂಗ್ರೆಸಿನಲ್ಲಿ ಭಿನ್ನಾಭಿಪ್ರಾಯವಿದೆಯೆಂಬುದು ಪೂರೈಸಿಯ ಕಾರಣ. ಏನೇ ಇದ್ದರೂ ಸರದಾರ ಪಟೇಲರಿಂದ ರಚಿಸಲ್ಪಟ್ಟ ಮಂತ್ರಿಮಂಡಲವು ಜನತಾ ಪ್ರಾತಿನಿಧ್ಯವನ್ನು ಒಳಗೊಳ್ಳುವ ಸ್ಥಿತಿಯಲ್ಲಿ ಇದ್ದಿಲ್ಲ. ಈ ಬಗ್ಗೆ ಮಾಡಿದ ಎಲ್ಲ ಯತ್ನಗಳು ವ್ಯರ್ಥವಾದವೂ ಕೊನೆಗೆ ಸಮ್ಮಿಶ್ರ ಸರಕಾರವು ಅಸ್ತಿತ್ವದಲ್ಲಿ ಬಂದಿತಾದರೂ ಗೃಹ, ಆರ್ಥ, ವಾಣಿಜ್ಯ, ಉದ್ಯಮ ಪಿ. ಡಬ್ಲ್ಯೂ. ಡಿ. ಮೊದಲಾದ ಮಹತ್ವದ ಶಾಖೆಗಳು ಅಧಿಕೃತ ಗ್ರಸಿಸಿದ ಕಡೆಗೇ ಉಳಿದವು. ಈ ಅವ್ಯವಸ್ಥೆಯು ಸಾರ್ವತ್ರಿಕ ಆಯ್ಕೆಯ ನಂತರ ಪರಿಹಾರವಾಗಬಹುದು; ಜನಪ್ರತಿನಿಧಿಕ ಸರಕಾರದ ಅಡಳಿತನವನ್ನು ನಡೆಯಿಸಬಹುದು.

ಈ ಮೊದಲು ಒಂದು ಮನೋಹರವಾದ ಘಟನೆ ನಡೆಯಿತು. ಭಾರತ ಸರಕಾರ–ಹೈದರಾಬಾದ್ ಸರಕಾರಗಳ ಮಧ್ಯೆ 'ಸ್ಟ್ಯಾಂಡ್ ಸ್ಟಿಲ್' (ಶಾಂತಿ) ಹಿಪ್ಪಂದವು ಏರ್ಪಡುವ ಅಂಕಿತಗೊಳ್ಳಬೇಕಾದ ಸಮಯವು ಬಂದು, ಆಗ ನಾನು (ರಮಾನಂದ ತೀರ್ಥ) ಸೆರೆಮನೆಯಲ್ಲಿದ್ದೆ. ಆಗಿನ ಕಾಂಗ್ರೆಸ್ ಅಧ್ಯಕ್ಷನಾಗಿದ್ದೆ. ಲಾಯಕ ಅಲ್ಲಿ ಮಂತ್ರಿ ಮಂಡಳವು ಸನ್ನೊಡನೆ ಮಾತುಕತೆ ನಡೆಸಿತ್ತು. ಆದರಲ್ಲಿ ಒಂದು ನಿಯಮಕ್ಕೆ ನಾನು ಒಪ್ಪುವುದು ಅವರಿಗೆ ಬೇಕಾಗಿತ್ತು. ಭಾರತ ಪಾಕಿಸ್ತಾನಗಳ ಯುದ್ಧವಾದಲ್ಲಿ ಹೈದರಾಬಾದವು ತಟಸ್ಥವಾಗಿಳ ಬೇಕು ಎಂಬುವುದೇ ಈ ನಿಯಮವಾಗಿತ್ತು. ಅದಕ್ಕೆ ನಾನು ಒಪ್ಪಲಿಲ್ಲ. ಮೊದಲು ಹೈದರಾಬಾದವು ಭಾರತದಲ್ಲಿ ಸೇರ್ಪಡೆಯಾಯಿತೆಂದು ಘೋಷಿಸಬೇಕು. ಬಳಿಕ ಉಳಿದ ಮಾತುಗಳ ಚರ್ಚೆ ಸೌಹಾರ್ದಯುಗಗಳು ಘಡೆಯಬೇಕೆಂದೂ ಹೇಳಿದೆ. ಪರಿಣಾಮವಾಗಿ ಮಾತುಕತೆ ಅಲ್ಲಿಗೇ ನಿಂತು ಸರಕಾರವು ನನ್ನನ್ನು ಸೆರೆಮನೆಯಿಂದ ಮುಕ್ತಗೊಳಿಸಿದರೂ ಮರಳಿ ಮತ್ತೆ ನಾನು ಸೆರೆಮನೆಯ ದಾರಿಯನ್ನು ಹಿಡಿಯಬೇಕಾಯಿತು.

ಚಿಕ್ಕ ಚಿಕ್ಕ ಮತ್ತು ದೊಡ್ಡ ಜಮೀನುದಾರರನ್ನೊಳಗೊಂಡ ತೆಲಂಗಣವು ಕಮ್ಯೂನಿಸ್ಟ ಆಂದೋಲನದ ಆಡುಂಬೋಲವಾಗಿದೆ. ಕಳೆದ ಮೂರು ವರ್ಷಗಳಿಂದ ಅಲ್ಲಿ ಸಾಯುಧ ಹೋರಾಟ ಘಡೆಯುತ್ತಿದ್ದು ಅಲ್ಲಿಯ ಜನತೆಗೂ ಸರಕಾರಕ್ಕೂ ಸಂಬಂಧವನ್ನೇ ತಪ್ಪಿಸಿದಂತಾಗಿರುತ್ತದೆ. ಈ ಕಮ್ಯೂನಿಸ್ಟರ ಮುಂದಿನ ಯೋಚನೆಯೇನೋ ಅವರೇ ಅದನ್ನು ಹೇಳಬೇಕು. ಆದರೆ ಅಲ್ಲಿಯ ಭೂಸಮಸ್ಯೆ (ಇದೇ ಕಮ್ಯೂನಿಸ್ಟ ಆಂದೋಲನದ ಮೂಲಕಾರಣವೆಂದು ಹೇಳಲಾಗುತ್ತಿದೆ) ಮಾತ್ರ ಬಿಡಿಸಲ್ಪಡಬೇಕು. ಇದೊಂದು ತೆಲಂಗಣದ ಒಕ್ಕಲಿಗರನ್ನು 'ಐಂದೂಕ ಆಂದೋಲನ' ದಿಂದ ಬಿಡಿಸುವ ಮೂರ್ಖವಾಗಿರುತ್ತದೆ. ಈ ಬಗ್ಗೆ ಆಳವಾಗಿ ವಿಚಾರಿಸಿದವರು 'ಐದು ಜನರನ್ನೊಳಗೊಂಡ ಪ್ರತಿಯೊಂದು ಕುಟುಂಬಕ್ಕೆ ೧೦೦ ಎಕರೆ ತುಸ್ಕಿ, ೫೫ ಎಕರೆ ಕಪ್ಪು ಭೂಮಿ ಎಲ್ಲಕ್ಕೂ ಹೆಚ್ಚೆಂದರೆ ಇರಬೇಕು; ಉಳಿದ ಭೂಮಿಯು ಒಕ್ಕಲಿಗರಲ್ಲಿ ಅನುಕೂಲ ಪದ್ಧತಿಯಿಂದ ವಿತರಣೆ ಮಾಡಲ್ಪಡಬೇಕೆಂದು ಹೇಳುತ್ತಿದ್ದಾರೆ. ಈ ಕಾರ್ಯವು ಕೂಡಲೇ ಕೈಗೊಳ್ಳಲ್ಪಡಬೇಕು. ಏಕೆಂದರೆ ಪ್ರಜಾಪ್ರಭುತ್ವ ಆಳಿಕೆಯ ಸಾಫಲ್ಯವು ಇಹದ ವಟ್ಟಿಗೆ ಇದನ್ನೇ ಅಪಲಂಬಿಸಿದಂತಿರುತ್ತದೆ.

ಹೈದರಾಬಾದ ಸಮಸ್ಯೆಗಳಲ್ಲಿ ಇನ್ನೂ ಒಂದು ಮಹತ್ವದ ಸಮಸ್ಯೆಯು ಇನ್ನೂ ಬಿಡಿಸದೆ ಉಳಿದಿರುತ್ತದೆ. ಹೈದರಾಬಾದ ಪ್ರದೇಶವು ಪ್ರಾದೇಶಿಕವಾಗಿ ಹಾಗೂ ಏಕ ಪ್ರಭುತ್ವ ರೀತಿಯಲ್ಲಿ ವಿವಿಧ ಜನಾಂಗಗಳನ್ನು ಅನೈಸರ್ಗಿಕವಾಗಿ ಕೂಡಿಸಿದ ಪ್ರದೇಶವಾಗಿರುತ್ತದೆ. ಭಾಷಾನುಗುಣವಾಗಿ ಈ ಸಂಸ್ಥಾನವು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಹೀಗೆ ಪೂರ್ತಿ ವಿಭಾಗಗಳಿಂದ ಕೂಡಿರುತ್ತದೆ. ಅವಶಪರ ಸಂಸ್ಕೃತಿ, ಭಾಷೆ, ಕುಲ, ಪದ್ಧತಿಗಳೇ ಅಪರವರ ದೈನಂದಿನ ಜೀವನದಲ್ಲಿ ಕಂಡು ಬರುತ್ತವೆ. ಆದುದರಿಂದ ಈ ಭಾಗಗಳು ಸಂಸ್ಥಾಪದ ಹೊರಗಿನ ಅಯಾ ಭಾಷೆಯ ಭಾಗಗಳೊಡನೆ ಸೇರ್ಪಡೆಯಾಗುವುದು ಸಹಜವೆಯಹು. ಹೈದರಾಬಾದಿನ ಎಲ್ಲಾ ಜನತೆಯು, ರಾಜಕೀಯ ಪಕ್ಷ ಹಂಗಡಗಳ ಇತರ ಸಂಘದ ಪಂಸ್ಥೆಗಳ ಅಭಿಪ್ರಾಯವೂ ಇದೇ ಆಗಿದೆ. ಹೈದರಾಬಾದ ಕಾಂಗ್ರೆಸ್ ಬರಲಿರುವ ಮಹಾ ಆಯ್ಕೆಯಲ್ಲಿ ಇದೇ ಹೆಜ್ಜೆಯನ್ನು ಇಡಲಿದೆ. ಭಾಷಾನುಗುಣ ಪ್ರಾಂತ ರಚನಾ ಪ್ರಶ್ನೆಯಾಗಿದ್ದ, ಹೈದರಾಬಾದದ ವಿತರಣೆಯೂ ಅದರೊಡನೆ ಸೇರಿದೆ. ಮಹಾ ಆಯ್ಕೆಯಾಗಿ ಕೂಡಲಿರುವ ಅಸೆಂಬ್ಲಿಯಲ್ಲಿ ಈ ಬಗ್ಗೆ ಒಂದು ನಿರ್ಣಯವಾಗಲಿದೆ. ಈ ಭಾಷಾವಾರು ಪ್ರಾಂತ ಪ್ರಶ್ನೆಯನ್ನು ಬಿಡಿಸುವ ಕಾರ್ಯವು ಕೇಂದ್ರದ ಕೈಯಲ್ಲಿದೆ. ಇದೊಂದಾಯಿತೆಂದರೆ ಆ ಬಳಿಕ 'ಹೈದರಾಬಾದ ಸಮಸ್ಯೆ' ಎಂಬುದೇ ಉಳಿಯಲಿಬುದಿಲ್ಲ. ಈ ದಿಸೆ ದೂರವಿಲ್ಲವೆಂದು ನಾವೆಲ್ಲರೂ ಆಶಿಸೋಣ.

ಜೈಹಿಂದ್ ಪತ್ರಿಕೆ.

ಪ್ರಕಟಣೆ.

ಶ್ರೀಮಾನ್ ಅಪ್ಪಚೆರವಂಡ ಮಾಧಪ್ಪನವರು ಜಾಕಾನೆಯಲ್ಲಿ ಕಟ್ಟಿಸಿದ ಶಾಲಾ ಕಟ್ಟಡದ ಮೇಲ್ಮಹಡಿಯ ರಿಸೇರಿ ಮಾಡುವ ಕೆಲಸಕ್ಕೆ ಕಂಟ್ರಾಕ್ಟದಾರರು ಬೇಕಾಗಿದ್ದಾರೆ. ಪಾಯಿಸ್‌ದಾರರು ಕೆಲಸದ ವಿವರವನ್ನು ಶಾಲಾ ಹೆಡ್‌ಮಾಸ್ಟರಿಂದ ತಿಳಿದು ಬಂದು ತಾ. 15–10–51ಕ್ಕೆ ಒಳಗೆ ತಿಳಿಸುಕೊಳ್ಳತಕ್ಕದ್ದು.

ಜಾರಾಜೆ ಶಾಲಾ
೨-೩ ಪಂಚಾಯಿತದಾರರು.

ಶ್ರೀ ಕೆ. ಯಂ. ಪೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಕಾಲ ಬಂದಾಗ.... .... !

ಮನುಷ್ಯನಿಗೆ ಯೋಗ್ಯತೆ ತಿಳಿಯುವದು ಅನುಕೂಲ ಬಂದಿದ್ದಾಗಲಲ್ಲ; ತೊಡಕಿನಲ್ಲಿರುವಾಗಲೆ ಎಂಬ ನಾಣ್ಣುಡಿಯಂತೆ ಕಾಲದ ಯೋಗಗಳನ್ನು ಅದಿರಿಸುವಾಗ! ದೇಶದವರಿಗೆ ಅದರ—ಅದ್ಧಿ ಮೊದಲು ಹೇಳುವದು ಸುಲಭವೇ ನೇಹಾದು. ಆದರೆ ತನ್ನ ಹೊಲಿಗೆ ಅಡು ಅನುಕರಣೀಯವೆಂದು ತಿಳಿಯುವವರು ತಿಲವೇ ಮಂದಿ! ಬ್ರಿಟಿಷರ ಅಡಳಿತವನ್ನು ಹೀನಾಯವಾಗಿ ದೂರಿದೆವು; ಅಹಾರಸಭಾವ ಅಂಚ ಗುಳಿತನ—ಕೃಸಂತೆಗಳನ್ನು ಟೀಕಿಸಿದೆವು. ಅಂತಹ ಟೀಕೆ ಮಾಡಿದವರಲ್ಲಿ ನಮ್ಮ ಪ್ರಧಾನ ಮಂತ್ರಿ ಜವಾಹರಲಾಲರೂ ಮುಖ್ಯರು. ಇಂದು ಅವರ ಕೈಯಲ್ಲಿ ರಾಷ್ಟ್ರದ ಅಡಳಿತ ವಿದೆ. ಅಡಳಿತ ಸಿಮೋಲ್ಲಂಘನಕ್ಕಾಗಿ ಅವರು ಕೈಗೊಂಡ ಕಾರ್ಯೋದಕ್ಷತೆಯನ್ನು ನಾವು ಶ್ಲಾಘಿಸುವದಾದರೂ ಅಂತಹ ಮಹಾ ಶಕ್ತಿಗಳು ದಿನದಿಂದ ದಿನಕ್ಕೆ ದೆಳೆಯುವುತ್ತಲೇ ಇರುವದನ್ನು ಗಮನಿಸುವಿಲ್ಲ! ಇದರ ಒಳಗುಟ್ಟು ಇಷ್ಟೆ! ಸ್ವಾತಂತ್ರ್ಯದ ಮುನ್ನ ಕಾಂಗ್ರೆಸಿಗರ ಪುಷ್ಪನ್ನು ದೇಶದ ಒಳ ಹಾಗೂ ಅಭ್ಯುದಯದ ಕಡೆಗೇ ಇತ್ತು! ಅಧಿಕಾರ ಕೈಗೆ ಬಂದ ಮೇಲೆ ಅ ವಿಶಾಲದೃಷ್ಟಿ ಉಳಿಯುಲಿಲ್ಲ. ಸ್ವಾರ್ಥ ಸಾಧನೆಯಲ್ಲಿ ಮಗ್ನರಾದರು. ಅರ್ಥಾತ್ ತಮ್ಮ ತಮ್ಮವರೇ ಅಧಿಕಾರದ ದುರುಪಯೋಗಪಡಿಸಿದರು. ಅಂತಲೇ ನೆಹ್ರೂ ಸರಕಾರ ನಾವು ಎಣಿಸಿದಷ್ಟು ಸುಸೂತ್ರವಾಗಿ—ಯೋಗ್ಯರೀತಿಯಲ್ಲಿ ಪಡೆಯುಲಿಲ್ಲ! ಕಾಲಬಂದಾಗಲೆಲ್ಲ ಸ್ವಾರ್ಥಸಾಧಿಸುವ ಜನ ಪಕ್ಷದಲ್ಲಿ ಬಹಳವಾಗಿದ್ದರಿಂದಲೇ ನೆಹ್ರೂ ಸ್ವತಃ ತನ್ನ ವಚನವನ್ನು ಪಾಲಿಸ ಧಾಗಿದ್ದಾರೆ. ಕಾಲಬಂದಾಗ....ಬಣ್ಣ ಬದಲಾಯಿಸುವ ಬುದ್ಧಿ ಕಾಂಗ್ರೆಸ್ಸಿಗರ ಕ್ಷಂಪ್ತಾದೀಕೆಂದು ನೆಹ್ರೂ ಅಂದು ಆರಿಯಬೇಕೆ 'ನಾನು ಅಧಿಕಾರಿಯಲ್ಲಾಗಿದ್ದರೆ ಕೃಸಂಶೆ ಮಾಡಿಪವರನ್ನು ಗಲ್ಲಿಗೇರಿಸುತ್ತಿದ್ದೆ' ಎಂದಿರಬೇಕು!

ಚುನಾವಣೆ ಕಾಲ ಹತ್ತಿರ ಹತ್ತಿರ ಬರುತ್ತಿರುವಾಗ ಹುರಿಯಾಳುಗಳು ತಪ್ಪಿಸಿ ಮೇಲಾಗುವದಕ್ಕೆ ಹೇಗೆ ವರ್ತಿಸುತ್ತಿದ್ದಾರೆಂಬುದನ್ನು ನಾವು ಕೆಲವು ಹಲವು ಉದಾಹರಣೆಗಳಿಂದ ತಿಳಿಸಿದ್ದೇವೆ. ಕಾಂಗ್ರೆಸ್ಸೇತರ ಪಕ್ಷಗಳಿಗಿಂತಲೂ ಸ್ವಪಕ್ಷ ಪ್ರತಿಸ್ಪರ್ಧಿಗಳಿಂತ ಪರಪಕ್ಷ ಖಂಡನೆಯೇ ಹೆಚ್ಚಾಗಿರುತ್ತದೆ! ದೇಶಭಕ್ತರನ್ನು ನಿಂದಿಸಿಯೇ—ಯಥಾರ್ಥವನ್ನು ಮರೆಮಾಚಿ ಅಸತ್ಯ ಸರಕಾರವನ್ನು ಟೀಕಿಸುವುದೇ ಸ್ವಾರ್ಥಸಾಧಿಸಬೇಕೆಂಬ ಹಂಬಲ! ಇದನ್ನು ನಾವು ಚುನಾವಣಾ ಸ್ಟಂಟೆ ಎಂದರೂ ಎನ್ನಬಹುದೇನೊ! ಆದರೆ ಕಾಂಗ್ರೆಸ್ಸಿಗರ ಕ್ಷೇ ಹಲವು ರೀತಿಯ ಮೇಲಾಟಗಳು ಪಡೆಯುತ್ತಿರುವದನ್ನು ನೋಡಬಹುದು. ಸಾಲ್ಕು ವರ್ಷಗಳಿಂದ ಜನತೆಗೆ ಕೇಡುಬಯಸಿದವರೂ, ದೇಶವನ್ನು ಅಲಕ್ಷಿಸಿದವರೂ, ಸ್ವಾನಗಂಭೀರ್ಯದಿಂದ ಜನತೆಯೊಡನೆ ಬೆರೆಯದವರೂ ಇಂದು ಅತ್ಯಂತ ಸೌಹಾರ್ದಭಾವ ದೇಶಸೇವಾ ದೃಷ್ಟಿಯನ್ನು ಬೀರುತ್ತಿದ್ದಾರೆ. ಮಾತ್ರವಲ್ಲ; ಕಾಂಗ್ರೆಸಿಗೆ ತಿಲೇಟಿಗಾಗಿ ಅಹರ್ನಿಶಿ ದುಡಿಯುತ್ತಲಿದ್ದಾರೆ. ಹುರಿಯಾಳುವು ವಸ್ತುತಃ ಜನಪ್ರೀತಿಪಾತ್ರನಾಗಿದ್ದರೆ ಈ ಬಗೆಯ ಚಾಣಕ್ಯತಂತ್ರವನ್ನು ಹೂಡುಕಬೇಕಾಗಿಲ್ಲ. ತನ್ನ ಕರ್ತವ್ಯದಲ್ಲಿ ಅಪ್ರಾಮಾಣಿಕತನ—ಜನಹಿತ ಕಾರ್ಯಗಳ ಲೋಪದೋಷವಿದ್ದರೆ—ತನ್ನ ನಿಲುವಿಗೆ ಸಂಶಯ ಅನಿಶ್ಚಿತತೆ ಸಹಜವಾಗಿಯೂ ತಲೆದೋರುತ್ತದೆ. ಅಂತಲೇ ಚುನಾವಣಾ ಕಾಲದಲ್ಲಿ ವಿವಿಧ ಪ್ರಕಾರೇಣ ತನ್ನ ಕೈಮೇಲಾಗುವಷ್ಟು ಕೈಯತ್ನಿಸುತ್ತಾನೆ. ಕಾಂಗ್ರೆಸ್ಸಿನ ಹತ್ತು ಆದರ್ಶಗಳು ಒತ್ತಟ್ಟಿಗೆ—ಇವನ ಕೌಶಲ್ಯ ಒತ್ತಟ್ಟಿಗೆ ಆಗಬೇಕಾದುದು! ಇಂತಹ ಸಂದರ್ಭದಲ್ಲಿ ತನ್ನ ದಿಗ್ವಿಜಯ ಪುಶ್ಚಿಯೊಂದೇ ಅವನ ತಲೆಯಲ್ಲಿ ಸುತ್ತುತ್ತದೆಯೇ ಹೊರತು ಯಥಾರ್ಥವಾದ ಮಾರ್ಗವಲ್ಲ!

ಕಾಂಗ್ರೆಸ್ಸಿನ ಟಕೇಟನ್ನು ಪಡೆದು ಜನತೆಯ ಪ್ರತಿನಿಧಿಯಾಗಿ ನಿಲ್ಲುವುದಕ್ಕೆ ಹವಣಿಸುವುದೇಕೆ? ಕಾಂಗ್ರೆಸು ಅಧಿಕಾರದಲ್ಲಿರುವ ಪಕ್ಷ ಅದರಲ್ಲಿ ತಾವೂ ಮಂದಿ ಬಂದರೆ ಮಂತ್ರಿಯೂಗಬಹುದೆಂಬ ದೂರ ದೃಷ್ಟಿಯೇ ಹೊರತು ತ್ಯಾಗಬುದ್ಧಿಯಲ್ಲ! ಕಾಂಗ್ರೆಸ್ಸಿಗೆ ಆಗಬೇಕಾದೇ ಇದ್ದರೆ—ಅಂತಹ ಹುರಿಯಾಳುಗಳು ಸ್ವಾಭಿಮಾನದಿಂದ ದೂರಾಗಿದ್ದರೆ—ಕಾಂಗ್ರೆಸ್ಸಿನ ಮುಖವಿಲ ತತ್ವಕ್ಕೆ ವಿರೋಧವಾದ ಮಾರ್ಗವನ್ನೇಕೆ ಹಿಡಿಯಬೇಕು! ಕಾಂಗ್ರೆಸು ಅಧಿಕಾರಕ್ಕೆ—ಸ್ವಾರ್ಥ ಸಂಕುಚಿತಗಳಿಗಾಗಿ ರುವ ಸಂಸ್ಥೆಯಲ್ಲ! ಅರ್ಧ ಶತಮಾನದಿಂದ ಒಂದು ಉಚ್ಚ ಧ್ಯೇಯವನ್ನು ಆರಾಧಿಸುತ್ತ ಲೋಕದ ಹಿತಕ್ಕಾಗಿ ಬದ್ಧಕಂಕಣವಾದ ಸಂಸ್ಥೆ! ಇಷ್ಟು ಇಡಿಯ ಸಂಸ್ಥೆಯ ತುದ್ದೀಕರಣ ಹಾಗೂ ಗೌರವವನ್ನು ಕಾಪಾಡಿಕೊಳ್ಳಬೇಕು. ವ್ಯಕ್ತಿಯ ವಿಜಯಕ್ಕಾಗಿ ತತ್ವವನ್ನು ಮುರಿಯುವದು ಅನುಚಿತ ಮಾರ್ಗ!

ಕಾಂಗ್ರೆಸ್ಸಿನ ಒಂದು ಸ್ಥಾನಕ್ಕೆ ಮೂರೋ ನಾಲ್ಕೋ ಆಕಾಂಕ್ಷಿಗಳಿರುವದು ಅನಿವಾರ್ಯ. ಆದರೆ ಈ ಜಿಗಿಗಳು ಒಂದಲ್ಲಿ ವ್ಯಕ್ತಿ ವ್ಯಕ್ತಿಗಳಲ್ಲಿ ವೈಮನಸ್ಯ ಹುಟ್ಟಿಸುವುದು ಸ್ವಾಭಾವಿಕ! ಇಂತಹ ವೈಮನಸ್ಯಗಳಲ್ಲಿ ಒಬ್ಬ ಹುರಿಯಾಳು ಇನ್ನೊಬ್ಬ ಹುರಿಯಾಳುವನ್ನು ಹಿಂದೂಡುವುದಕ್ಕೆ ಬಹಳ ಪ್ರಯತ್ನ ನಡೆಸುತ್ತಾನೆ. ಆಗ ಫಸ್ಟ್ ಪೋಸ್ಟ್‌ಗೆ ಹೋಟ್ಟುತ್ತದೆ. ಸ್ಪರ್ಧೆ ಪ್ರತಿಸ್ಪರ್ಧಿಗಳಿಂದ ಸಂಸ್ಥೆಯ ಮೂಲ ತತ್ವಕ್ಕೆ ಅಪಚಾರ ಕೆಲವೆ ಕೆಲವು ದಿನಗಳಲ್ಲಿ ಕಾಣಿಸಿಕೊಳ್ಳುತ್ತದೆ. ಈ ಎಲ್ಲಾ ದೋಷಗಳು ದೃಷ್ಟಿಗೆ ಬೀಳುವವೆಂದು ಕಾಲ ಬಂದಾಗ....ಸ್ವಾರ್ಥ... ಸಾಧಿಸುವೆ ಮೊನಸ್ಸು ಹೊಡೆಯಿದರಿಂದಲೇ ಏಂಬುದನ್ನು ನಾವು ಮರೆಯಬಾರದು! ಸಚ್ಚಾರಿತ್ರ್ಯ ಸದಾಭಿಪ್ರಾಯಗಳಿದ್ದಲ್ಲಿ ಈ ಗೊಂದಲವೇಳದು. ಕಾಲ ಬಂದ ಹಾಗೆ ಕೋಲ ಕಟ್ಟುವದರ ದುಷ್ಪರಿಣಾಮವಿದು! ಚೆ ಸೌಜನ್ಯದ ಸ್ಪರ್ಧೆಯ ಕಾಲದಲ್ಲಿ ಹುರಿಯಾಳುಗಳು ಸಂದರ್ಭಸಾಧಕರಾಗಿ ವರ್ತಿಸಿದರೂ ಜನತೆ ಜಾಗ್ರತೆಯಿಂದ ತನ್ನ ನಿಲುವೆಯನ್ನು ಭದ್ರಗೊಳಿಸಿ ದೇಶದ ಕಲ್ಯಾಣವನ್ನು ಹಾರೈಸಬೇಕು!

'ನವಯುಗ'

ಚಂದ್ರಾನ ಮತ್ತು ಕಂಪೆನಿ.

— ಪ್ರಕಟಣೆ. —

ಈ ಮೂಲಕ ಕೊಡಗು ಪ್ರಾಂತದ ಪ್ರತಿ ಓರ್ವ ಚಿಲ್ಲರೆ ಜವುಳಿ ವ್ಯಾಪಾರಸ್ಥರಿಗೆ ತಿಳಿಯಪಡಿಸುವುದೇನೆಂದರೆ—ಈ ಕೆಳಗಿನ ಬೊಂಬಾಯಿ ಗಿರಣಿಯ ಸಮಯ ತಿಂಕ್ಕಿದ (Lapsed goods) ಬಟ್ಟೆಗಳನ್ನು, ಪ್ರತಿಯೊಬ್ಬರಿಗೂ ಅವರವರಿಗೆ ಬೇಕಾದ ಬಟ್ಟೆಗಳನ್ನು ಬೇಕಾದಷ್ಟು ಕೊಡಲ್ಪಡುತ್ತದೆ. ಇಷ್ಟವಿದ್ದವರು ಕೆಳಗೆ ಕಾಣಿಸಿದ ಕಾರೀಕನಿಂದ ಹತ್ತು ದಿವಸಗಳೊಳಗೆ ಬಂದು ಪಡೆದುಕೊಳ್ಳಬಹುದು. ಹತ್ತು ದಿವಸಗಳ ನಂತರ ಇವುಗಳನ್ನು ಪ್ರಾಂತ್ಯದ ಹೊರಗಿನ ಜವುಳಿ ವ್ಯಾಪ್ಯಾರಸ್ಥರಿಗೆ ಮಾರಲ್ಪಡುತ್ತವೆ.

Tax mark & No.	Name of the Mill	Variety	Exmill	Ps.
30 ಏಪ್ರಿಲ್ SM	.... ಕಟಾವು ಮಿಲ್ಸ್	... ವೈಲ್ (SF)	.... 1—7—1	 54
30 ,, SQ	.... ,,	.... ,, (SF)	.... 1—5—4	 29
38 ,, 198	.... ,,	.... ಪ್ರಿಂಟು ಚೀಟು (F)	.... 1—8—7	 7
6 ,, 1286	.... ಸಂಚುರಿ ಮಿಲ್ಸ್	.... ಶರ್ಟಿಂಗ್ (F)	.... 1-14—8	 5
54 ,, 45005	.... ಶ್ರೀರಾಮ ಮಿಲ್ಸ್	.... ವೈಲ್ (SF)	.... 1—8—6	 65
54 ,, 50243	.... ,,	.... ,, (SF)	.... 1—5-11	 57
54 ,, 50243	.... ,,	... ಪ್ರಿಂಟೆಡ್ ವೈಲ್ (SF)	.... 1—9—9	 19
6 ,, 1369	.... ಸಂಚುರಿ ಮಿಲ್ಸ್	.... ಮೇಟ ಶರ್ಟಿಂಗ್ (F)	.... 1—8—5	 27
18 ,, Lovely Spring ..	ದಿ ಇಂಡ್ಯಾ ಯುನೈಟೆಡ್ ಮಿಲ್ಸ್	ಪ್ರಿಂಟೆಡ್ ವೈಲ್ (SF)	.... 1-10—7	 15
59 ,, 124	.... ಜೇಮ್ಸ್ ಫಿನ್ಲೆ	.... ಮಲ್ಲ್ (SF)	.... 1—5—2	 23
22 ,, 167	.... ,,	.... ,, (SF)	.... 1—4—9	 28
47 ,, 2654	.... ವೈಯೊನೆಕ್ಸ್ ಮಿಲ್ಸ್	.... ಡೋರಿಯ (SF)	.... 1-10—9	 44
16 ,, 5220	.... ದಿ ಇಂಡ್ಯಾ ಯುನೈಟೆಡ್ ಮಿಲ್ಸ್	.. ಮಲ್ಲ್ (SF)	.... 1—5—0	 155
1 ಮೇ 1007	.... ಎಪೆಲ್ಲೊ ಮಿಲ್ಸ್	.... ಲೋಂಗ್ ಕ್ಲಾತ್ (M)	.... 1—7—5	 82
32 ,, 55	.... ಶ್ರೀರಾಮ ಮಿಲ್ಸ್	.... ಕೋರ (F)	.... 1—1—1	 17
6 ,, 3455	.... ಸಂಚುರಿ ಮಿಲ್ಸ್	.... ಪೊಪ್ಲಿನ್ (SF)	.... 2—6—2	 139
6 ,, 90000	.... ,,	.... ಟ್ವಿಲ್ಲ್ (F)	.... 1-13—8	 37
6 ,, 1525	.... ,,	.... ಶರ್ಟಿಂಗ್ (F)	.... 1-11—2	 12
6 ,, ಮೋತಿ ವೈಲ್	.... ,,	.... ವೈಲ್ (SF)	.... 1-10—3	 38
6 ,, ಪರಮು ಸುಖ	.... ,,	.... 8 ವಾರು ಧೋತಿ (SF)	.. 14-15—6	 152
3 ಜೂನ್ 7544	.... ಬೋಂಬೆ ಡಾಯಿಂಗ್ & ಮೇ ಫ್ಯಾಕ್ಚರಿಂಗ್ ಕಂಪೆನಿ	.... ಮಲ್ಲ್ (F)	 0-13-11	 50
30 ಜೂನ್ ಸುಮತ್ರ ಮೈಲ್	.. ಕಟಾವು ಮಿಲ್ಸ್	.... ಮಲ್ಲ್ (SF)	.... 1—3—8	 120
31 ,, ಮೆಡವಾಲಂ	.... ಕೊಹಿನೂರ್ ಮಿಲ್ಸ್	... ಬಿಳಿ ಪೊಪ್ಲಿನ್ (SF)	.... 2—5—4	 60

ಮಡಿಕೇರಿ,
ತಾರೀಕು 5-10-1951.

ಚಂದ್ರಾನ ಮತ್ತು ಕಂಪೆನಿ.

ಹೃದಯ ಪರಿವರ್ತನೆಯೇ ನಿಜವಾದ ಗಾಂಧಿ ಜಯಂತಿ.

ಲೇ:—ಶ್ರೀ ಕಾಕಾ ಕಾಲೇಲ್ಕರ್.

ಭಾರತದ ಶ್ರೀಯರು ಗೃಹ ಕೃತ್ಯವನ್ನು ಸಡಿಸುತ್ತಾರೆ. ಗಂಡನು ಯೊ ಇತರ ಪುರುಷರು ಹೆಚ್ಚು ಕಡಮೆ ಎಷ್ಟಾಗುತ್ತದೊ ಅಷ್ಟು ಮಾಡಿದ ಸಂಪಾದನೆಯಿಂದ ಸಂತುಷ್ಟಳಾಗಿರುತ್ತಾಳೆ. ತಾನು ಕಡಿಮೆಯಾಗಿ ಊಟ ಮಾಡಿದರೂ ಗಂಡನಿಗೆ ಬೇಕಾದಷ್ಟು ಊಟಕ್ಕೆ ಬಡಿಸುತ್ತಾಳೆ. ಗಂಡ ಹೇಗೆ ನಡೆ ಕೊಂಡರೂ ತಾನು ತಂನ ಶೀಲ ಮತ್ತು ಪ್ರೇಮೆನಡತೆಯನ್ನು ಬಿಡುವುದಿಲ್ಲ. ಎಲ್ಲಾ ಜವಾಬ್ದಾರಿಯೂ ಹೇಗಸಿನದೇ. ಗಂಡಸಿನ ಜವಾಬ್ದಾರಿ ಏನೂ ಇಲ್ಲ. ಇಷ್ಟು ಸದ್ಗುಣಗಳನ್ನು ನೋಡಿಯೂ ನಾವು ಹೆಂಗಸನ್ನು ಮನೆಯಲ್ಲೇ ಇಡುತ್ತೇವೆ—ಮಕ್ಕಳಂತೆ-ಮತ್ತೆ ಹೇಳುತ್ತೇವೆ, ಸ್ತ್ರೀಯೆಂದರೆ 'ದೇವಿ' ಎಂತ. ಗೋಮಾತೆಯ ಸ್ಥಿತಿ ಯೂ ವದಿದೆಯೋ ಅದೇ ಸ್ಥಿತಿ ಹೆಂಡತಿಯದೂ ಆಗಿದೆ.

ಭಾರತದ ಸಂತರೂ ಸಹ ಬಹಳ ಒಳ್ಳೇ ಜನರು. ಸಂತರು ಎಲ್ಲಾ ತರದಯೋಗ್ಯತೆ ಇದ್ದರೂ ಸಹ ಥಥ ಸಂಪಾದನೆಗೆ ಹೊರಡುವದಿಲ್ಲ. ಜನರ ಸೇವೆಯನ್ನು ಶುಂಬಾ ಮಾಡುತ್ತಿರುತ್ತಾರೆ. ಜನರಿಂದ ಅತ್ಯಲ್ಪ ವಸ್ತುಗಳನ್ನು ತೆಗೆದುಕೊಳ್ಳುತ್ತಾರೆ. ತಮ್ಮ ತಪಸಿನಿಂದ ಸಮಾಜದ ಪುಣ್ಯವನ್ನು ಹೆಚ್ಚಿಸುತ್ತಾರೆ. ಯಾರಾದರೂ ಪಾಪ ಮಾಡಿದರೆ ಅಂಥವರ ಪಾಪವನ್ನು ತಮ್ಮ ಆಶೀರ್ವಾದದಿಂದ ಹೋಗಲಾಡಿಸುತ್ತಾರೆ. ಒಂದು ರೊಟ್ಟಿ ಎಡೆಯು ಲಂಗೋಟಿಗಿಂತ ಹೆಚ್ಚೇನು ಅವರು ಕೇಳುವದಿಲ್ಲ. ಇಷ್ಟಕ್ಕಿಂತ ಹೆಚ್ಚಿಗೆ ಕೊಟ್ಟರೂ ತೆಗೆದುಕೊಳ್ಳುವದಿಲ್ಲ. ಎಲ್ಲಿಯಾದರೂ ಗುಡಿಸಲಿನಲ್ಲಿ ಬಿದ್ದಿರುತ್ತಾರೆ. ಇಂಥಾ ಸಂತರು ಜೀವದಲ್ಲಿರುವಾಗ ಕೆಲವರು ಕಪಟಿಎಂದು ಭಾವಿಸಿ ಒರೆಯಾಗಿ ತಿಕ್ಕಿ ನೋಡುತ್ತಿರುತ್ತಾರೆ ಉಳಿದವರು ಅಂಥಾ ಸಂತರ ಮೇಲೆ ಭಕ್ತಿತೋರಿಸುತ್ತಾರೆ. ಅಂಥ ಸಂತರು ಮೃತರಾದ ನಂತರ ಅಂಥಾ ಸಂತರಿಗೆ ಹೇ ವಸ್ಥಾನ ಕಟ್ಟಿ ಪುಣ್ಯ ಸಂಪಾದನೆ ಮಾಡಲು ಪ್ರಯತ್ನ ಮಾಡುತ್ತಾರೆ. ತಪಸ್ಸು ಮಾಡುವ ಎಲ್ಲಾ ಜವಾಬ್ದಾರಿಯೂ ಇಂಥಾ ಸಂತರ, ತಪಸ್ವಿಗಳ ಮೇಲಿದೆ. ನಾವು ಐಹಿಕ ವ್ಯವಹಾರದಲ್ಲಿ ಇದ್ದುಕೊಂಡು ಭೋಗ ವಿಲಾಸದಲ್ಲಿ ಮುಳುಗಿದರೂ ಏನೂ ಅಡ್ಡಿ ಇಲ್ಲ. ಸಂತರ ಗುರು ಮಂತ್ರ ಉಪದೇಶ ತೆಗೆದುಕೊಂಡರಾಯಿತು. ಅದನ್ನು ಜಪಿಸಿದರಾಯಿತು. ಮತ್ತು ಸಮಯ ಬಂದಾಗ ಗುರುವಿನ ಪಾದಕ್ಕೆ ಫಲಸ್ಕರಿಸಿದರೆ ಆಯಿತು. ಇಷ್ಟು ಮಾಡಿದರೆ ನಮ್ಮ ಕರ್ತವ್ಯ ಪೂರಾ ಮಾಡಿದಂತಾಯಿತು.

ಈ ತರದ ಆದರ್ಶ ಸೇವಕರನ್ನು ಪಡೆದ ಶಷ್ಯ ನೇಲೆ ಯಾವ ಜವಾಬ್ದಾರಿಯನ್ನು ಇಟ್ಟು ಕೊಳ್ಳದ ಸೇವಕರು ನಮ್ಮ ಸಮಾಜದಲ್ಲಿ ಇದ್ದಾರೆ. ಅವರು ದೇಶದ ಶ್ರೇಷ್ಠ ಮುಂದಾಳುಗಳು. ಅವರನ್ನು ನಾವು ರೈಲು ಗಾಡಿಯ ಇಂಜಿನ್ ಡ್ರೈವರೆಂದು ಎಣಿಸುತ್ತೇವೆ. ಇಂಜಿನು ನಡೆಸುವವನು ರಾತ್ರಿಯೆಲ್ಲಾ ಎಚ್ಚೆತ್ತುಕೊಂಡು ನಿರ್ಣಯಿಸಿದ ಸ್ಥಳಕ್ಕೆ ಗಾಡಿಯನ್ನು ತಲಪಿಸುತ್ತಾನೆ. ಗಾಡಿಯಲ್ಲಿ ಕುಳಿತಿರುವ ಯಾತ್ರಿಕರಿಗೆ ತಾತ್ಕ ನಿದ್ರೆ ಕೆಡಬೇಕೆಂದು ಇಲ್ಲ. ಅವರು ಖುಶಿಯಾಗಿ ನಿದ್ರಿಸಬಹುದು ಅಥವಾ ಜಡುರಂಗ ಆಡುತ್ತಿರಬಹುದು. ಇಂಜಿನ ಡ್ರೈವರಿನ ಸಂಬಳ ಫಿಕ್ಸ್ ಆಗಿರುತ್ತೆ. ಇಂಜಿನನ್ನು ಅತನ ಸುಪರ್ದಿಗೆ ಕೊಟ್ಟರಾಯಿತು. ಮಂದಿನ ಕೆಲಸವೆಲ್ಲಾ ಅವನದೆ.

ಮಹಾತ್ಮಾಗಾಂಧಿಯವರು ಸಂತರಾಗಿದ್ದರು. ಮತ್ತು ದೇಶದ ಮುಂಖಂಡರಾಗಿದ್ದರು. ಅವರ ಮುಂದಾಳುತನವನ್ನು ನಾವು ಒಪ್ಪಿಕೊಂಡೆವು. ದೇಶದ ಮುಂದಾಳುತನವನ್ನು ಅವರಿಗೆ ಒಪ್ಪಿಸಿ ಬಿಟ್ಟೆವು. ಬಾಕಿ ಎಲ್ಲಾ ಕೆಲಸ ಅವರಿಗೇ ಗೊತ್ತು. ಅದರೆ ಮಹಾತ್ಮರು ಹೇಳುತ್ತಾ ಬಂದರು. ಭಾರತವಾಸಿಗರೇ, ನೀವು ನಮ್ಮ ಜೀವನದಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಜೀವಪವಸ್ತು ಶುದ್ಧಪಡಿಸಿಕೊಳ್ಳಬೇಕು. ಅವರ ಮಾತಿನಲ್ಲಿ ಯಾರು ಪ್ರಭಾವಿತರಾದರೋ ಅಂಥವರು ಕೆಲವು ವಂಟ್ಟಿಗೆ ಕೆಲವು ಸುಧಾರಣೆ ಮಾಡಿಕೊಂಡರು. ಅದರೆ ದೇಶದ ಹೆಚ್ಚಿನ ಜನರು ತಮ್ಮ ಭಾರತೀಯ ಸಂಸ್ಕೃತಿಯ ಸನಾತನ ರೀತಿಯನ್ನೇ ಅನುಸರಿಸುತ್ತಾ 'ಗಾಂಧೀಜೀ ಕಿ ಜಯ' ಎಂತ ಹೇಳುತ್ತಾ ದೇಶದ ಮುಂದಾಳ್ತನವನ್ನು ಗಾಂಧಿಯವರ ಶಿಷ್ಯರಿಗೆ ಒಪ್ಪಿಸಿ ಗಾಂಧಿಯವರ ಆತ್ಮ ಶುದ್ಧಿಯ ಪ್ರೇಥನೆಯನ್ನು ಕವಿಯಿಂದ ಕೇಳುತ್ತಿದ್ದರೂ ತಮ್ಮ ಜೀವನವಲ್ಲಿ ಏನು ಜವಾಬ ಬದಲಾವಣೆ ಮಾಡಿಕೊಳ್ಳಬೇಕಂತ ಅವರಿಗೆ ತೋಚಲೇ ಇಲ್ಲ.

ನಾವು ಅಹಿಂಸಾವಾದಿಗಳು, ಅಂದರೆ ಜಘರ ಕೊಲೆ ಮಾಡುವದು ಮಾಂತಾದ್ದು ನಮಗೆ ಬೇಡ. ನಾವು ಸೈನ್ಯಕ್ಕೆ ಸೇರುವುದಿಲ್ಲ ಯಾವಅಪಾಯಕ್ಕೂ ಗುರಿಯಾಗುವುದಿಲ್ಲ. ಅದರೆ ತಮ್ಮವ್ಯಕ್ತಿಗತ ರಾಗ ದ್ವೇಷಗಳಲ್ಲಿ ಸ್ವಲ್ಪವಾದರೂ ಬದಲಾಯಿಸಲು ತಯಾರಿಲ್ಲ.

ಏಶಿಯಾ ಮತ್ತು ಅಮೇರಿಕದ ಸಂಬಂಧ ಮಾತು ಬಂದಾಗ ನಾವು ತಟಿಸ್ಥರಾಗಿರುತ್ತೇವೆ. ಯುದ್ಧದ ತಯಾರಿ ಏನೂ ಮಾಡಿಕೊಳ್ಳುವುದಿಲ್ಲ. ಯಾರ ಪಕ್ಷದಲ್ಲಿ ನ್ಯಾಯವಿದೆ. ಯಾರ ಪಕ್ಷದಲ್ಲಿ ಅನ್ಯಾಯವಿದೆಯೆಂಬುದನ್ನು ವಿಚಾರಿಸುವ ಗೊಂದಲಕ್ಕೆ ನಾವು ಯಾಕೆ ಬೀಳಬೇಕು. ಎಲ್ಲವೂ ಶಾಂತಿ ಮತ್ತು ಸುಖದಿಂದ ಇರಬೇಯುತ್ತಿದ್ದರಾಯಿತು. ಪ್ರಪಂಚದ ಜಗಳದಲ್ಲಿ ನಾವು ಯಾಕೆ ಕೈಹಾಕಬೇಕು. ಎನ್ನುತ್ತೇವೆ.

ಆದರೆ ಯಾವಾಗ ಪಾಕಿಸ್ತಾನದ ಪ್ರಶ್ನೆ ಬಂದಾಗ ನಮ್ಮ ಶಾಂತಿಕೇತು ಬೇರೆ ರೂಪವನ್ನು ತಾಳುತ್ತದೆ. ಪಾಕಿಸ್ತಾನವು ಅತ್ಯಾಯಕಾರಿಯೇ ಆಗಿದೆ. ಇದರಲ್ಲಿ ಸಂಶಯವಿಲ್ಲವೆನ್ನುತ್ತೇವೆ. ಅದ್ದರಿಂದ ಅದಕ್ಕೆ ಸರಿಯಾದ ಪಾಠ ಕಲಿಸಬೇಕು. ಇದರಲ್ಲಿ ಏನು ತಪ್ಪು ಎಷ್ಟುತ್ತೇವೆ.

ಏಶಿಯಾ, ಅಮೇರಿಕಾದ ವಿಷಯಗಳು ಬಂದಾಗ ನಮ್ಮ ಭೀತಿ ಒಂದು ರೀತಿ, ಪಾಕಿಸ್ತಾನದ ವಿಷಯ ಬಂದಾಗ ಇನ್ನೊಂದು ರೀತಿ ಈಧೇದ ಯಾಕೆಂತ ನಮಗೆ ತಿಳಿಯುವುದಿಲ್ಲ.

ನಾವು ಪ್ರಜಾತಂತ್ರವನ್ನು ಹೊಗಳುತ್ತೇವೆ. ಪ್ರಾಪ್ತ ವಯಸ್ಕರಿಗೆಲ್ಲಾ ಮತಾಧಿಕಾರ ದೊರಕಿದೆ. ಯಾರು ದೊಡ್ಡವರಿಲ್ಲ, ಯಾರೂ ಸಣ್ಣವರಿಲ್ಲ. ಯಾರಿಗೂ ಹೆಚ್ಚಿನ ಅಧಿಕಾರವೇನೂ ಇಲ್ಲ. ಅದಕೆ ಹಿಂದೂ ಸಮಾಜ ಸಂಘಟನೆಯ ಪಾಯವಲ್ಲಿ ವರ್ಣವ್ಯವಸ್ಥೆಯೇ ಮುಖ್ಯವಾದಹ್ದಾಗಿದೆ. ಜಾತಿ ಭೇದದ ವೇಲಾ ಕೀಳು ಎಂಬ ಭಾವನೆಯು ತುಂಬಿದೆ, ವೈಶ್ಯಜಾತಿಯವರು ಶೂದ್ರಜಾತಿಯವರ ನೇಲೆ ಒಂದೇ ಪ್ರಕಾರವಾಗಿ ತೋಷಣೆ ನಡಿಸುತ್ತಿದ್ದಾರೆ. ಹಿಂದೂ ಸಮಾಜವು ಬೇರೆ ಸಮಾಜದವರ ಮೇಲೆ ಪೂರಾ ಮಾನವತೆಯ ವರ್ತನೆಯನ್ನು ನಡಿಸುತ್ತಿಲ್ಲ ಎಂತ ತೋರಿಸಿಕೊಟ್ಟರೂ ನಮ್ಮ ದೋಷಗಳು ನಮಗೆ ತಿಳಿಯುವುದಿಲ್ಲ. ಈ ದೇಶದಲ್ಲಿ ಇರುವ ಅಹಿಂದೂ ಜನರು ಹಿಂದುಗಳಲ್ಲಿ ಇರುವ ಬೇರೆಯಾಗಿರಬೇಕೆಂಬ ಗುಣವನ್ನು ತಿಳಿದುಕೊಂಡ ನಂತರ ನಾವು ಎಷ್ಟು ದೊಡ್ಡ ಮನಸಿನವರೆಂತ ಹೇಳಿಕೊಂಡರೂ ನಮ್ಮ ಮೇಲೆ ವ್ಯಂಬಳೆ ಹುಟ್ಟುವುದಿಲ್ಲ. ಈ ವೂತು ಚಿಕ್ಕದಾಗಿ ಕಾಣಬಹುದು ಆದರೆ ರಾಷ್ಟ್ರ ಸಂಘಟನೆಯಲ್ಲಿ ಈ ಗುಣವು ಬಹಳ ಬಲಹೀನತೆಯನ್ನುಂಟುಮಾಡಿ ಸಂಘಟನೆಯನ್ನು ಕೆಡಿಸುತ್ತದೆ.

ವಿಧಾನವಾಗಿ ಮಂದರಿಸಿದರಾಯಿತು. ರಾಷ್ಟ್ರದ ಸಾಮಾಜಿಕ ಸಂಘಟನೆಗೆ ಅಡ್ಡಿಯಾಗುವ ಈ ಹೋಷಗಳನ್ನು ದೂರ ಮಾಡಬೇಕೆಂಬ ಮಾತು ಹಿಂದುಗಳಿಗೆ ಮೆಚ್ಚುವುದಿಲ್ಲ. ನಾವು ಏತು ಹೇಳುತ್ತೇವೆಂದರೆ—ಸಮಾಜದಲ್ಲಿ ಇರುವ ಪದ್ಧತಿಗಳನ್ನು ಒಂದೇ ಸಾರಿ ಬಿಟ್ಟುಬಿಡದೆ ನಿಧಾನವಾಗಿ ಮಂದರಿಸಿ ಅಂದರೆ ಸುಧಾರಣೆಗಳನ್ನು ನಿಧಾನಮಾಡಿ ಎಂತ—ನಮ್ಮ ಮುಖಂಡರಲ್ಲಿಯೂ ಸಹಾತನ ಪ್ರವೃತ್ತಿ ಬಂದು ಹೋಗಿದೆ. ಸಮಾಜದಲ್ಲಿ ಇರುವ ಹೋಷಗಳನ್ನು ಜನರಲ್ಲಿ ಒಂದು ಪ್ರಜ್ಞಾ ಅಂಕೋಲನ ಸೆಡೆಸಿ ಕಿತ್ತು ಹಾಕುವ ಬದಲು, ಖಾನೂನು ಮೂಲಕ ಸಹ ಸುಧಾರಣೆ ಮಾಡಬಾರದೆನ್ನುವವರ ವಿಷಯ ಹೇಳುವುದೇ ಬೇಡ. ಮುಳುಗುವ ದೋಣಿಯಲ್ಲಿ ತುಂಬುತ್ತಿರುವ ನೀರನ್ನು ನಿಧಾನವಾಗಿ ತೆಗೆಯುತ್ತಾ ಇದ್ದರೆ ದೋಣಿ ಉಳಿಯುವುದಿಲ್ಲ.

ಇದೇ ನಮ್ಮ ದೇಶದ ಸ್ಥಿತಿ. ಇಂಥಾ ಸ್ಥಿತಿಯಲ್ಲಿ ನಾವು ಗಾಂಧಿ ಜಯಂತಿಯನ್ನು ಆಚರಿಸುತ್ತಿದ್ದೇವೆ. ಗಾಂಧಿಯವರ ಜಯ ಜಯಕಾರ ಮಾಡಲು ನಾವು ಯಾರು? ಯಾವ ದಿನ ಗಾಂಧಿಯವರು ಅಸ್ಪೃಶ್ಯತಾ ನಿವಾರಣೆಗಾಗಿ ತನ್ನ ಜೀವನವನ್ನು ಜೂಜಿಗೆ ಹೊಡಿದರೋ ಮತ್ತು ಯಾವ ದಿನ ಹಿಂದೂ ಮುಸ್ಲಿಂ ಏಕತೆಗಾಗಿ ಸರ್ವ ಧರ್ಮ, ಸರ್ವ ಪಂಥ ಮತ್ತು ಸರ್ವ ಜಾತಿಗಳ ಏಕತೆಯ ಸವಾಲಿಗಾಗಿ ತಮ್ಮ ಪ್ರಾಣವನ್ನೇ ಕಳಕೊಂಡರೋ, ಸರ್ವಸ್ವವನ್ನೂ ಬಲಿದಾನ ಮಾಡಿದರೋ, ಆ ದಿನವೇ ಅವರ ಅಂತಿಮ ಮತ್ತು ಪರಿಪೂರ್ಣ ವಿಜಯವಾಯಿತು. ಇತಿಹಾಸವು ಅವರ ಜಯವನ್ನು ಸ್ವರ್ಣಾಕ್ಷರಗಳಲ್ಲಿ ಅಗಲೇ ಬರೆದು ಇತ್ತಿದೆ. ನಾವು ನಮ್ಮ ಹೃದಯದಲ್ಲಿ ಮತ್ತು ನಮ್ಮ ಜೀವನ ಪೃಷ್ಠಿಯಲ್ಲಿ ಗಾಂಧಿ ತತ್ವದ ವಿಜಯ ನೋಡಿದರೆ ಮಾತ್ರ ನಾವು ಗಟ್ಟಿಯಾಗಿ 'ಗಾಂಧೀಜೀ ಕೀ ಜೈ' ಎಂತ ಹೇಳಲು ಅರ್ಹರಾಗುತ್ತೇವೆ.

ಇಲ್ಲವಾದರೆ ನಾವು ಪೃಷ್ಠಿಯನ್ನು ನಮ್ಮ ಒಳಕ್ಕೇ ಪಸರಿಸಿ ನಮ್ಮ ಹೃದಯದಲ್ಲಿ ಎಷ್ಟು ಕಚ್ಚಡ, ಮೈಲಿಗೆ ತುಂಬಿದೆ ಎಂತ ನೋಡಬೇಕು. ಅಂಥಾ ಕೊಳೆ ಎಷ್ಟರ ವರೆಗೆ ನಾವು ತೊಟ್ಟು ಬಿಡುವುದಿಲ್ಲವೋ ಅಲ್ಲಿಯ ವರೆಗೆ ನಾವು ಗಾಂಧೀಜಿಯವರ ಕೊಲೆ ಮಾಡುತ್ತಿರುತ್ತೇವೆ.

ಹಿಂದೂಕೋಡ್ ಬಿಲ್ ಸಂಬಂಧವಾಗಿ ತಾತ್ಸಾ ಹೇಳುವುದಲ್ಲ. ಗಾಂಧೀಜಿಯವರು ಎಷ್ಟು ಹಿಂದೂ ಸಮಾಜ ಸುಧಾರಣೆ ಮಾಡಬೇಕೆಂದಿದ್ದರೋ ಅದರ ಅಲ್ಪ ಭಾಗ ಮಾತ್ರ ಈ ಬಿಲ್ಲಿನಲ್ಲಿ ಇದೆ. ಅದರಲ್ಲಿ ಇರುವ ಸುಧಾರಣೆಯಿಂದ ನನಗೆ ಸಂತೋಷವಿಲ್ಲ. ನಾವು ಗಾಂಧೀಜಿಯವರ ಮಾತು ಕೇಳಲಿಕ್ಕೆ ತಯಾರಿದ್ದರೆ ಹಿಂದೂ ಕೋಡ್ ಬಿಲ್‌ದಿಂತ ಬಹಳ ಮುಂದುವರಿದು ಹೋಗಬೇಕು. ಯಾವಾಗ ಗಾಂಧಿಯವರು ತಮ್ಮ ಹೃದಯದಲ್ಲಿ ಜನ್ಮ ತಾಳುತ್ತಾರೋ ಆವಾಗ ನಾವು ಗಾಂಧಿ ಜಯಂತಿ ನಡೆಸಲು ಅರ್ಹರಾಗುತ್ತೇವೆ.

ಶ್ರೀಮಂಗಲನಾಡು ಸಹಕಾರಿ ಬ್ಯಾಂಕು ಲಿಮಿಟೆಡ್, ಹುದಿಕೇರಿ.

ಬ್ಯಾಂಕಿನ ಬಡ್ಡಿಯ ದರವನ್ನು ಈ ಕೆಳಗಿನಂತೆ ಏರಿಸಲಾಗಿದೆ.

ಎಲ್ಲಾ ಡಿಪಾಜಿಟ್ಟುಗಳನ್ನು ಅಂಗೀಕರಿಸಲಾಗುತ್ತೆ.

೧ ವರ್ಷದ ನಿರಖು ತೀವಣಾತಿಗೆ—	....	೨½%
೨ ವರ್ಷದ —	....	೩%
೩ ,, —	....	೩½%
೪ ,, —	....	೪%
೫ ,, —	....	೫%
೫ ವರ್ಷದ ಮೇಲ್ಪಟ್ಟು ಡಿಪಾಜಿಟ್ಟಿಗೆ —	....	೫½%

ಹೆಚ್. ಸಿ. ನಂಜಪ್ಪ,
ಗೌ. ಕಾರ್ಯದರ್ಶಿ.

4-2

ಕೊ ಡ ಗು

ತಾ. ೫-೧೦-೧೯೫೧ನೇ ಶುಕ್ರವಾರ

ನೆಹರೂರವರ ಕರೆ.

ಪಂಡಿತ ಜವಾಹರಲಾಲರು ಕಾಂಗ್ರೆಸ್ ಅಧ್ಯಕ್ಷಪದವನ್ನು ವಹಿಸಿದಂದಿನಿಂದ ಕಾಂಗ್ರೆಸ್ಸಿನ ಪುನರ್ರಚನೆ ಮತ್ತು ಐಕ್ಯತೆಗಾಗಿ ತುಂಬಾ ಪ್ರಯತ್ನಿಸುತ್ತಿದ್ದಾರೆ. ಈ ದೃಷ್ಟಿಯಿಂದ ಅವರು ಕಾಂಗ್ರೆಸ್ಸಿಗರಿಗೆ ಅನೇಕ ಉಪಯುಕ್ತ ಸೂಚನೆಗಳನ್ನು ನೀಡಿದ್ದಾರೆ. ಇಂದು ಅಧಿಕಾರದಲ್ಲಿರುವ ಕಾಂಗ್ರೆಸ್ ಕಛೇರಿಗಳನ್ನು ವಿಸರ್ಜಿಸಿ ಹೊಸದಾಗಿ ಸೇವಾ ಸಿ ಕಾಂಗ್ರೆಸ್ಸಿನಲ್ಲಿ ನವಚೇತನವನ್ನು ತುಂಬುವದು ಶತ್ರುಗಳಿಗೆ ಸಾಧ್ಯವಾಗದಂತೆ ಕೆಲಸವಾಗಿದೆ. ಈ ಶುದ್ಧೀಕರಣವು ಮುಂದೆ ಕ್ರಮಶಃ ಆಗಬೇಕಾಗಿದೆ. ಆದರೆ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರನ್ನು ಆರಿಸುವ ವಿಚಾರದಲ್ಲಿ ಅವರು ಸ್ಪಷ್ಟ ಮಾರ್ಗದರ್ಶನವನ್ನು ತೋರಿಸಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ಬಂದೊಡನೆ ದೇಶದ ಆಡಳಿತವನ್ನು ಕಾಂಗ್ರೆಸಿಗರಿಗೆ ಒಪ್ಪಿಸಲಾಯಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತ್ಯಾಗ ಮಾಡಿದ ಸರ್ಟಿಫಿಕೇಟೊಂದು ವಿನಾ ಆಗ ಬೇರೆ ಯೋಚನೆ ಮಾಡದೆ ಕಾಂಗ್ರೆಸ್ಸಿಗರ ಕೈಗೆ ಆಡಳಿತ ಜವಾಬ್ದಾರಿ ಕೊಡಲ್ಪಟ್ಟಿತು. ಆದರೆ ಆ ಜವಾಬ್ದಾರಿಯನ್ನು ಹೊತ್ತ ಕಾಂಗ್ರೆಸಿಗರು ಕಾಲು ವರ್ಷ ಮೂರವರೀತಿ ಆಡಳಿತ ನಡೆಸಿದ್ದಾರೆ ಎಂಬುದು ಸ್ಪಷ್ಟವಿದಿತವಾಗಿದೆ. ಆದ್ದರಿಂದ ಕಾಂಗ್ರೆಸಿಗನೆಂಬುದು ಇಲ್ಲವೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತ್ಯಾಗ ಮಾಡಿದ್ದಾನೆಂಬುದು ಒಬ್ಬನನ್ನು ಆಡಳಿತಕ್ಕೆ ಅರ್ಹನೆಂದು ಮಾಡಲಾರದು. ದಕ್ಷನೂ, ಯೋಗ್ಯನೂ, ನಿಸ್ವಾರ್ಥಿಯೂ ಆದ ವ್ಯಕ್ತಿಯು ಕಾಂಗ್ರೆಸಿನ ಹೊರಗಿದ್ದರೂ ಅಂಥಾವನು ಅರಿಸಿ ಬರುವಂತೆ ನೋಡುವದು ಕಾಂಗ್ರೆಸಿನ ಕರ್ತವ್ಯವೆಂದು ನೆಹರೂರವರು ಹೇಳಿದ್ದಾರೆ. ಕಾಂಗ್ರೆಸ್ಸಿನ ನಿಯಮಗಳು ಕಾಂಗ್ರೆಸ್ಸನ್ನು ಬಲಪಡಿಸಲಿರುವದಲ್ಲದೆ ಭೇರಲ್ಲ. ಅದ್ದರಿಂದ ಕಾಂಗ್ರೆಸ್ಸಿನಲ್ಲಿ ಐಕ್ಯತೆಯನ್ನು ಸಾಧಿಸಿ, ಹೊಸ ಜನರನ್ನು ಸೇರಿಸಿ ಬಲಯುತ ಸಂಸ್ಥೆಯಾಗಿ ಕಟ್ಟುವ ಕಾರ್ಯದಲ್ಲಿ ಕೆಲವು ನಿಯಮಗಳನ್ನು ಉಲ್ಲಂಘಿಸಿದರೂ ತಪ್ಪಲ್ಲವೆಂಬುದು ನೆಹರೂರವರ ಅಭಿಪ್ರಾಯವಾಗಿದೆ. ಈ ವಿಷಯವನ್ನೇ ಮಹಾತ್ಮಾ ಗಾಂಧಿಯವರು ಅಂದೊಮ್ಮೆ ಹೇಳಿದ್ದರು. ಸ್ವಾತಂತ್ರ್ಯ ದೊರೆತ ನಂತರ ದೇಶವೇ ಕಾಂಗ್ರೆಸ್ಸು. ಪ್ರತಿಯೊಬ್ಬನೂ ಕಾಂಗ್ರೆಸ್ಸಿನ ಸದಸ್ಯನೆಂದು ಅವರು ಸಾರಿದ್ದರು. ಈ ಕಾರಣಕ್ಕಾಗಿಯೇ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತನವನ್ನೂ ಪ್ರಜಾಮೂಡಲಾಗಿತ್ತು. ಆ ಮಾರ್ಗದಲ್ಲಿಯೇ ಇಂದು ಪಂಡಿತನೆಹರೂರವರು ಆಲೋಚಿಸುವಂತಿದೆ. ಯೋಗ್ಯರೂ, ಧಕ್ಷರೂ, ನಿಸ್ವಾರ್ಥಿಗಳೂ ಕಾಂಗ್ರೆಸ್ಸಿನ ಪ್ರತಿಜ್ಞೆಗೆ ಸಹಿ ಹಾಕಿ ಇಂದೂ ಉಮೇದುವಾರರಾಗಬಹುದಾಗಿದೆ. ಕಾಂಗ್ರೆಸ್ಸಿಗರು ಅಂಥಾವರಿಗೆ ಅನುಮೋದಿಸಬೇಕೆಂದಿದೆ. ಇದು ದೇಶದ ಆಡಳಿತವನ್ನು ಯಶಸ್ವಿಯಾಗಿ ದಕ್ಷವಾಗಿ, ಜನಹಿತಕಾರಕವಾಗಿ ಕಟ್ಟಲಿರುವ ಏಕ ಮಾರ್ಗವಾಗಿದೆ. ಇದಕ್ಕಾಗಿ ಕಾಂಗ್ರೆಸ್ಸಿಗರು ತಮ್ಮ ಅಂತರಿಕ ಜಗಳಗಳನ್ನು ಮರೆತು ಐಕ್ಯರಾಗಬೇಕು. ಹೊಸ ಜನರನ್ನು ಆಹ್ವಾನಿಸಬೇಕು.

ಕೊಡಗಿನ ಕಾಂಗ್ರೆಸಿನಲ್ಲಿ ಹಲವು ಪಕ್ಷಗಳಿಂದ ಐಕ್ಯತೆ ಇಲ್ಲ. ಕಾಂಗ್ರೆಸು ಇಬ್ಭಾಗವಾಗಿ ಎರಡು ಪಕ್ಷಗಳೂ ಒಂದಕ್ಕೊಂದು ವಿರುದ್ಧವಾದ ರಾಜಕೀಯವನ್ನು ಅನುಸರಿಸಿ ಅದಕ್ಕನುಗುಣವಾಗಿ ದೇಶವೇ ಇಬ್ಭಾಗವಾಗಿದೆಯೆನ್ನಬಹುದು. ಈ ಅನಿಷ್ಟಪರಿಸ್ಥಿತಿಯಿಂದಾಗಿ ಕೊಡಗಿನ ರಾಜಕೀಯ, ಸಾಮಾಜಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಸೂಕ್ತ ಐಕ್ಯತೆ, ಸೌಹಾರ್ದತೆಗಳಿಲ್ಲದಾಗಿದೆ. ಪರಿಣಾಮವಾಗಿ ದೇಶಹಿತಕಾರಕವಾದ ಕೆಲಸಗಳಾಗುತ್ತಿಲ್ಲ. ಸರಕಾರವು ಕಚ್ಚಾಡುವ ಎರಡೂ ಪಕ್ಷಗಳ ಮಧ್ಯದಲ್ಲಿ ಕುಳಿತು ತನ್ನ ಕರ್ತವ್ಯಶೂನ್ಯತೆಗೆ ಈ ಪಕ್ಷಗಳನ್ನು ಪರಪಕ್ಷ ಎತ್ತಿಕಟ್ಟುತ್ತಾ ದಿನ ನೂಕುತ್ತಿದೆ. ಈ ಪರಿಸ್ಥಿತಿ ಸರಿಪಡಿಸಿ ಕೊಡಗಿನಲ್ಲಿ ಒಂದು ಐಕ್ಯರಂಗವೇರ್ಪಡಬೇಕೆಂಬ ಬಯಕೆ ಪ್ರತಿಯೊಬ್ಬನಲ್ಲಿದ್ದರೂ, ಪ್ರತಿ ವ್ಯಕ್ತಿಯೂ ತನ್ನ ಪಾರ್ಟಿಯ ತತ್ವಗಳಿಗೆ ಕಟ್ಟುಬಿದ್ದಿರುವ ಕಾರಣ ಈ ಅನಿಷ್ಟ ಸಂಕೀರ್ಣತೆಯನ್ನೊಡೆದು ದೇಶದ ಹಿತದೃಷ್ಟಿಯಿಂದ ವಿಶಾಲದೃಷ್ಟಿಯನ್ನು ತಳೆದು ತಮಗೆ ಸೋಲಾದರೂ ಚಿಂತೆಯಿಲ್ಲ; ದೇಶದ ಹಿತವಾಗಲೀ ಎಂಬ ಉದಾರತೆಯನ್ನನುಸರಿಸಿದಂತೆ ತೋರುವದಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ನೆಹರೂರವರ ಕರೆ ಪ್ರತಿಯೊಬ್ಬನಿಗೆ ಪಥದರ್ಶಕವಾಗಿದೆ.

ಕೊಡಗಿನ ರಾಜಕೀಯ ಭವಿಷ್ಯದ ವಿಚಾರದಲ್ಲಿ ಕಾಂಗ್ರೆಸಿನವರೊಳಗೇನೇ ಭಿನ್ನಾಭಿಪ್ರಾಯಗಳಿವೆ. ಮುಂಬರುವ ಚುನಾವಣೆಯಲ್ಲಿ ಕೊಡಗಿನ ಭವಿಷ್ಯವೆ ಚುನಾವಣಾ ವಿಚಾರವಾಗಲಾರದೆಂದು ಕೆಲವರು ಹೇಳಿದರೂ ಜನತೆಯು ಈ ಪ್ರಶ್ನೆಯನ್ನು ಕೇಳಿಯೇ ಮತದೀಯುವದರೆಂಬುದರಲ್ಲಿ ಸಂಶಯವಿರಲಾರದು. ಆದ್ದರಿಂದ ಮುಂಬರುವ ಚುನಾವಣೆಯು ಭವಿಷ್ಯದ ನಿರ್ಣಯ ತತ್ವದ ಮೇಲೆಯೇ ಆಗುವದು. ಹಾಗೆ ಆಗಬೇಕಾದುದೂ ಸಮಂಜಸವೇ. ಏಕೆಂದರೆ ಕೇಂದ್ರ ಪಾರ್ಲಿಮೆಂಟಿನಲ್ಲಿ ಗೃಹಮಂತ್ರಿಯವರು ಮೂತಾಹುತ್ತಾ ದೇಶದ ಭವಿಷ್ಯ ನಿರ್ಣಯದ ವಿಚಾರದಲ್ಲಿ ಮುಂದೆ ಜನತೆಯು ಅಭಿಪ್ರಾಯವನ್ನು ಸರಕಾರವು ಪ್ರತ್ಯೇಕವಾಗಿ ತಿಳಿಯಲಾರದೆಂದೂ ಈ ಚುನಾವಣೆಯಲ್ಲಿ ಆರಿಸಿ ಬರುವ ಪ್ರತಿನಿಧಿಗಳ ಅಭಿಪ್ರಾಯದಂತೆಯೇ ಭವಿಷ್ಯ ನಿರ್ಣಯವಾಗುವದೆಂದೂ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಿರುವಾಗ ಕೊಡಗಿನ ಭವಿಷ್ಯವು ಈ ಚುನಾವಣೆಯಲ್ಲಿ ಆರಿಸಿ ಬಂದ ಪ್ರತಿನಿಧಿಗಳ ಬಹುಮತದ ನಿರ್ಣಯದಂತಾಗುವದು. ಹಾಗಿರುವಾಗ ಈ ಚುನಾವಣೆಯಲ್ಲಿ ಅವಿಚಾರವನ್ನು ಪುಸಿದಾರರು ಮುಂದೆ ಇಡದಿದ್ದರೆ ದ್ರೋಹಾತ್ಮಕವಾಗುವದು.

ಆದರೆ ಕೊಡಗು ಕಾಂಗ್ರೆಸ್ಸಿನಲ್ಲಿ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದು ಕೆಲವರು ವಿಲೀನೀಕರಣಕ್ಕೂ ಕೆಲವರು ಪ್ರತ್ಯೇಕತೆಗೂ ವಾದಿಸುವವರಿದ್ದಾರೆ. ಹಾಗಿರುವದರಿಂದ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರನ್ನು ನಿಶ್ಚಿಸುವಾಗ ಗೊಂದಲವಾಗುವದು. ಯಾವದೇ ಒಂದೇ ಪಕ್ಷವನ್ನು ಕಾಂಗ್ರೆಸ್ ಅಧಿಕೃತ ಉಮೇದುವಾರರೆಂದು ನಿಶ್ಚಿಸಲಾಗದು. ಇಕ್ಕಡೆಯವರಿಗೂ ಸರಿ ಸ್ಥಾನ ಕೊಟ್ಟರೆ ಸಮಸ್ಯೆ ಪರಿಹಾರವಾಗದು. ಒಂದು ಪಕ್ಷವನ್ನು ಕಾಂಗ್ರೆಸ್ ಮತಿಯಿಂದ ನಿಶ್ಚಿಸಿದಕೆ ಕಾಂಗ್ರೆಸ್ಸಿಗರೇ ಆದ ಪ್ರತಿಸ್ಪರ್ಧಿಗಳು ಕಾಂಗ್ರೆಸ್ಸಿಗೆ ವಿರುದ್ಧ ಹೋರಾಡಬೇಕಾಗುವುದಲ್ಲದೆ ಕಾಂಗ್ರೆಸ್ಸನ್ನು ಟೀಕಿಸಬೇಕಾಗುವದು. ಇದರಿಂದ ಕಾಂಗ್ರೆಸ್ಸಿನಲ್ಲಿರುವ ಇಂದಿರುವೆ ಪಕ್ಷಗಳ ಮಧ್ಯೆ ಅಂತರವು ಇನ್ನೂ ಹೆಚ್ಚಾಗುವುದು. ಇದು ನೆಹರೂರವರ ಕರೆಗೆ ವಿರುದ್ಧವೂ ಆಗುವುದು. ಆದ್ದರಿಂದ ಕಾಂಗ್ರೆಸ್ಸಿನಲ್ಲಿ ಐಕ್ಯ ಸಾಧಿಸಿ ಕೊಡಗಿನ ಕಾಂಗ್ರೆಸ್ಸನ್ನು ಒಂದಾಗಿ ಕಟ್ಟಬೇಕಾದರೆ ಕಾಂಗ್ರೆಸು ಶಿಸ್ತು ಅಧಿಕೃತ ಉಮೇದುವಾರರನ್ನು ನಿಲ್ಲಿಸದೆ ಎಲ್ಲರೂ ಅವರವರ ವ್ಯಕ್ತಿಗತ ಯೋಗ್ಯತೆಯ ಪ್ರಕಾರ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಬಿಡಬೇಕು. ಹಾಗೆ ಮಾಡಿದರೆ ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿಗರನ್ನು ಕಾಂಗ್ರೆಸಿಗರಾಗಿ ಎದುರಿಸುವ ಪರಿಸ್ಥಿತಿಯು ತಪ್ಪುವದು. ಕಾಂಗ್ರೆಸ್ ಸಂಸ್ಥೆಯೂ ಚುನಾವಣಾ ಕೆಲಸಗಳಿಗೆ ಳೆಯಲ್ಪಡದೆ ಘನತೆಯನ್ನು ಳಿಸಿಕೊಳ್ಳಬಹುದು. ಚುನಾವಣೆಯ ನಂತರ ಬಹುಮತವಾಗಿ ಬಂದ ಪಕ್ಷದವರು ಅಧಿಕೃತ ಕಾಂಗ್ರೆಸ್ ಪಕ್ಷವೆನಿಸಿಕೊಳ್ಳುವರು. ಹೀಗಾದರೆ ಮಾತ್ರ ಎರಡಾಗಿರುವ ಕೊಡಗು ಕಾಂಗ್ರೆಸ್ಸನ್ನು ಒಂದಾಗಿ ಕಟ್ಟಬಹುದಲ್ಲದೆ ಅನ್ಯಥಾ ಬೇರಿಲ್ಲ. ಸಂಬಂಧಿಸಿದ ಕಾಂಗ್ರೆಸ್ ಅಧಿಕಾರಿಗಳು ಇತ್ತ ಗಮನಿಸುವರೇ?

ವರ್ತಮಾನ.

ತಾ. ೨ಅರಿಂದ ಇಂದಿನವರೆಗೆ ಮಡಿಕೇರಿಗೆ ೮ ಇಂಚು ೯೭ ಸೆಂಟು ಮಳೆಯಾಗಿದೆ. ಈ ವರೆಗೆ ಮಡಿಕೇರಿಗೆ ಒಟ್ಟಾಗಿ ಇಂದಿಗೆ ೬೦ ಇಂಚು ೭೩ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೧೨೮ ಇಂಚು ೪೭ ಸೆಂಟು ಮಳೆಯಾಗಿತ್ತು.

ಮುಂಬರುವ ಚುನಾವಣೆಯಲ್ಲಿ ಕೊಡಗಿಗೆ ಕೇಂದ್ರ ಜನತಾ ಸಭೆ (ಪಾರ್ಲಿಮೆಂಟ್) ಯಲ್ಲಿ ಇರುವ ಒಂದೂ ಸ್ಥಳಕ್ಕೆ ಶ್ರೀ ಕೆ. ಟಿ. ಉತ್ತಪ್ಪನವರು ಕೊಡಗು ಪ್ರತ್ಯೇಕ ಪಕ್ಷದ ಪರವಾಗಿ ಕಾಂಗ್ರೆಸಿನ ಹೆಸರಿನಲ್ಲಿ ನಿಲ್ಲಲೂ ಉಮೇದುವಾರಿಕೆ ಪತ್ರಿಕೆಯನ್ನು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಮುಖಾಂತರ ಕಳುಹಿಸಿರುವರೆಂದೂ ಮತ್ತು ಸಂಯೋಜನಾ ಪಕ್ಷದ ಶ್ರೀ ಎಸ್. ಸೋಮಣ್ಣನವರು ತಮ್ಮ ಉಮೇದುವಾರ ಪತ್ರಿಕೆಯನ್ನು ಕೆ. ಪಿ. ಸಿ, ಸ್ಥಳೀಯ ಮುಖಂಡರ ಕ್ಷಳುಹಿಸಿರುವರೆಂದೂ ತಿಳಿಯು ಬರುತ್ತದೆ.

ಭಾರತದಲ್ಲಿ ಬ್ರಿಟಿಷ್ ಹೈಕಮಿಷನ್ ರಾಷ್ಟ್ರ ಆರ್ಚಿಬಾಲ್ಡ್ ನೈ ಇವರ ಪ್ರತಿನಿಧಿಯಾಗಿ ಮಿ. ಕ್ಯಾಮಿಂಗ್ ಬ್ರೂಸ್ ಇವರು ದಕ್ಷಿಣ ಹಿಂದೂಸ್ಥಾನದಲ್ಲಿರುವ ಯೂರೋಪಿಯನರನ್ನು ಸಂದರ್ಶಿಸುತ್ತಾ ಕೊಡಗಿಗೆ ತಾ. ೧-೧೦-೫೧ ರಲ್ಲಿ ಬಂದಿರುವರು. ಇವರು ಇಲ್ಲಿ ಒಂದೆರಡು ದಿನಗಳಿದ್ದು ಇಲ್ಲಿಯ ಯೂರೋಪಿಯನರನ್ನೂ ಅವರ ತೋಟಗಳನ್ನೂ ಸಂದರ್ಶಿಸುವರೆಂದು ವರ್ತಮಾನ.

ಮುಂಬರುವ ಚುನಾವಣೆಯಲ್ಲಿ ಉಮೇದುವಾರರು ಉಪಯೋಗಿಸಬೇಕಾದ ಚಿಹ್ನೆಗಳ ಪಟ್ಟಿಯನ್ನು, ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸು ಪಕ್ಷವೆಂದು ಪ್ರಾಂತ್ಯದಲ್ಲಿ ನಿಶ್ಚಿತವಾಗಿರುವ ಪಕ್ಷದವರು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ನಿರ್ದುಕಿಸಲ್ಪಟ್ಟ ಚಿಹ್ನೆಯನ್ನು ಮಾತ್ರ ಉಪಯೋಗಿಸತಕ್ಕದ್ದು. ಮೇಲೆ ಹೇಳಿದ ರೀತಿ ಪ್ರಾಂತ್ಯದ ಕಾಂಗ್ರೆಸ್ ಸಂಸ್ಥೆಯಿಂದಾ ನಿರ್ಧರಿಸಲ್ಪಡದ ಇತರ 'ಕಾಂಗ್ರೆಸ್' ಪಕ್ಷಕ್ಕೆ ಸೇರಿದ ಉಮೇದುವಾರರು ಖಾನೂನು ರೀತ್ಯಾ ಪ್ರತ್ಯೇಕವಾಗಿ ಕಾಯ್ದಿಟ್ಟಿರುವ ಚಿಹ್ನೆಗಳ ಪಟ್ಟಿಯನ್ನು ಬಿಟ್ಟು ಇಲೆಕ್ಷನ್ ಕಮಿಷನರಿಂದ ನಿಶ್ಚಿತವಾದ ಚಿಹ್ನೆಗಳ ಪಟ್ಟಿಯಿಂದ ಯಾವುದೇ ಮೂರು ಚಿಹ್ನೆಗಳನ್ನು ಚುನಾಯಿಸಿಕೊಳ್ಳಬಹುದು ಎಂಬಡಾಗಿ ಇಂಡಿಯಾ ಸರಕಾರದ ಇಲೆಕ್ಷನ್ ಕಮಿಷನ್ ಅಧಿಕಾರಿಗಳು ಸ್ಥಳೀಯ ಸರಕಾರದವರಿಗೆ ತಿಳಿಸಿರುತ್ತಾರೆ.

ಗಾಂಧೀಜಯಂತಿ.

ತಾರೀಕು ೨ನೇ ಅಕ್ಟೋಬರ್ ಮಂಗಳವಾರ ದಿನ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಡಿಬೇಟಿಂಗ್ ಸೊಸೈಟಿಯ ಆಶ್ರಯದಲ್ಲಿ ಗಾಂಧೀಜಯಂತಿಯು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಶ್ರೀ. ಪಂಧ್ಯರಂಡ ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ವೇದಪಠನ, ಗೀತಾವಾಚನ ಬೈಬಲ್ ಮತ್ತು ಕೊರಾನ್ ಪಠನಗಳು ನಡೆದುವು. ಅನೇಕ ಅಧ್ಯಾಪಕರೂ ಬಾಲಕ ಬಾಲಕಿಯರೂ ಪೂಜ್ಯ ಮಹಾತ್ಮರ ವಿಷಯ ಭಾಷಣಗಳನ್ನು ಮಾಡಿದರು. ಅಧ್ಯಕ್ಷರು ಧನ್ಯಾತ್ಮರಾದ ಮಹಾತ್ಮಾಗಾಂಧಿಯವರನ್ನು ವಿವಿಧ ದೃಷ್ಟಿಗಳಿಂದ ವಿವರಿಸಿ ಭಾರತೆದ ಭಾವೀಜನಾಂಗವಾದ ವಿದ್ಯಾರ್ಥಿಗಳು ಪೂಜ್ಯ ಬಾಪೂಜಿಯ ಭವ್ಯ ತತ್ವಗಳನ್ನು ಪರಿಪಾಲಿಸಬೇಕೆಂದು ಭಾಷಣ ಮಾಡಿದರು. ರಾಮಭಜನೆ, ರಾಷ್ಟ್ರಗೀತೆಗಳ ತರುವಾಯ ಜಯಘೋಷದೊಡನೆ ಸಭೆಯು ಮುಕ್ತಾಯಗೊಂಡಿತು.

ಬೆಟ್ಟಂಗಾಲದಲ್ಲಿ ಶ್ರೀ. ನಾಯಿಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಗಾಂಧಿಜಯಂತಿಯು ಆಚರಿಸಲ್ಪಟ್ಟಿತು.

॥ ದಸರಾ ಉತ್ಸವ ॥

ಈ ಸಲ ದಸರಾ ಉತ್ಸವ ಕಾಲದಲ್ಲಿ ಮೈಸೂರಿನಲ್ಲಿ ಕುದುರೆ ಜೂಜು ಪಡೆಯುವುದೊಂದು ವಿಶೇಷ. ಕಳೆದ ಹತ್ತು ವರ್ಷಗಳಿಂದ ಮೈಸೂರಿನಲ್ಲಿ ಕುದುರೆ ಜೂಜು ನಡೆಯುವುದೇ ನಿಂತು ಹೋಗಿತ್ತು. ಅದಕ್ಕೆ ಹಿಂದೆ ಜೂಜಿನ ಕಿಂಗಳಿವಲ್ಲಿ ಸಾಧಾರಣವಾಗಿ ನಡೆಯುತಿತ್ತು. ದಸರಾ ಕಾಲದಲ್ಲಿ ಕೆಲವು ಜೂಜಿನ ಕಣ್ಣ ಜನರು ಸಾ ಜೂಜುಗಳನ್ನು ಪಡೆಸಲಾಗುತಿತ್ತು. ಇದೇ ಮೊದಲನೇ ಸಾರಿಯಾಗಿ ಭಾರಿ ಕುದುರೆ ಜೂಜು ದಸರಾ ಕಾಲದಲ್ಲಿ ಏರ್ಪಾಡಾಗಿದೆ.

ವಸ್ತು ಪ್ರದರ್ಶನ

ಪ್ರತಿ ವರ್ಷದಂತೆ ದಸರಾ ವಸ್ತು ಪ್ರದರ್ಶನವೂ ನಡೆಯುತ್ತಿದೆ. ಅದಕ್ಕಾಗಿ ವಸ್ತು ಪ್ರದರ್ಶನದ ಆವರಣದಲ್ಲಿಯೂ, ಮತ್ತು ಜೀವಣ್ಣರಾಯರ ಕಟ್ಟೆ ದೈದಾನದಲ್ಲಿಯೂ ವಿದ್ಯುದ್ದೀಪಾಲಂಕಾರಗಳನ್ನು ಮಾಡಲಾಗುತ್ತಿದೆ.

ದಸರಾ ಹಿಂದೆ ಹೇಗಿತ್ತು?

ಈಗಿನ ಕಾಲದಲ್ಲಿ ದಸರಾ ಉತ್ಸವವನ್ನು ನೋಡುವವರಿಗೆ ಹಿಂದಿನ ಕಾಲದಲ್ಲಿ ಅದು ಹೇಗೆ ನಡೆಯುತಿತ್ತಿದ್ದಿತೆಂಬುದು ಗೊತ್ತಿಲ್ಲದೆ ಇರಬಹುದು.

ಈಗಿನ ಅರಮನೆಯನ್ನು ಕಟ್ಟುವುದಕ್ಕೆ ಮುಂಚೆ ದಸರಾ ದರ್ಬಾರು ಜಗನ್ಮೋಹನ ಬಂಗಲೆಯಲ್ಲಿ ನಡೆಯುತಿತ್ತು. ಈಗಿನ ಅರಮನೆ ಕಟ್ಟಿದ ಮೇಲೆ ಕೂಡ ಕೋಟೆಯಲ್ಲಿ ಅನೇಕ ಮನೆಗಳಿದ್ದು ನವರಾತ್ರಿ ಉತ್ಸವವು ಅವುಗಳ ಮಧ್ಯದೇ ಜರುಗುತಿತ್ತು. ಅರಮನೆಯ ಮುಂದೆ "ಫಿರಂಗಿ ಖಾನೆ" ಎಂಬ ಕಟ್ಟಡ ಮತ್ತು ವಿದ್ಯುಚ್ಛಕ್ತಿ ಸರಬರಾಜು ಮಾಡುವ 'ಎಂಜಿನ್ ಹೌಸ್' ಇದ್ದವು.

ಮೊಂಬತ್ತಿ ದೀಪಗಳ ಕಾಲ!

ವಿಜಯ ದಶಮಿಯ ದಿನ ಜಂಬೂ ಸವಾರಿ ಮೆರವಣಿಗೆಯು ಕೋಟೆಯಿಂದ ನೇರವಾಗಿ ದೊಡ್ಡ ಪೇಟೆ ರಸ್ತೆ ಮೂಲಕ ವಾಗಿ, ಬೆಂಗಳೂರು ರಸ್ತೆಯ ಪಕ್ಕದಲ್ಲಿ ಕೋಲ್ಸ್ ಗಾರ್ಡನ್ ಬಳಿ ಇರುವ ಬನ್ನಿ ಮಂಟಪಕ್ಕೆ ಹೋಗುತಿತ್ತು. ರಾತ್ರಿ ಮೆರವಣಿಗೆಗೆ ಅಗತ್ಯ ಕಾಲದಂತೆ ವಿದ್ಯುಚ್ಛಕ್ತಿ ದೀಪಗಳಿಲ್ಲದಿದ್ದಾಗಿಂದ ಮೊಂಬತ್ತಿ ಹಚ್ಚಿದ ಲಾಂದ್ರಗಳನ್ನು ಕಟ್ಟಿಡಿಸಿ ಗೋಡೆಗಳಿಗೆ ಸಿಗಿಸುತ್ತಿದ್ದರು.

'ಪೂರ್ವವಿ ಫೌಜು' ನೋಡಲು ಹಳ್ಳಿಗಳಿಂದ ಬರುತಿದ್ದವರು ತಮ್ಮ ಗಾಡಿಗಳನ್ನು, ಹಾಲಿ ಅರಮನೆ ಕಛೇರಿ ಕಟ್ಟಿರುವ ಕಡೆ ಇದ್ದ ಭಾರಿ ತೋಪಿನಲ್ಲೂ ಮತ್ತು ದೊಡ್ಡ ಕೆರೆ ಪಕ್ಕದಲ್ಲಿ ಇದ್ದ ತೋಪಿನಲ್ಲಾ ಬಿಚ್ಚಿಸಿ ಅಲ್ಲಿಯೇ ಅಡಿಗೆ ಮಾಡಿಕೊಂಡು ಇರುತಿದ್ದರು.

ಜನಸಂದಣಿ ಹತೋಟಿಗೆ ಬಾಳೆಪಟ್ಟೆ ಹೊಡೆತ!

ಅರಮನೆ ಮುಂದೆ ಈಗಿರುವಷ್ಟು ವಿಶಾಲವಾದ ಬಯಲು ಜಾಗ ಆಗಿರಲಿಲ್ಲವಾದ್ದರಿಂದ, ಉತ್ಸವ ನೋಡಲು ಸೇರುತಿದ್ದು ಅಗಾಧ ಜನಸಂದಣಿಯನ್ನು ಹತೋಟಿಯಲ್ಲಿಡಲು ಪೋಲೀಸರಿಗೆ ಹೆಣಂಬಾ ಪ್ರಯಾಸವಾಗುತಿತ್ತು. 'ಬಾಳೆ ಪಟ್ಟಿಯಿಂದ ಹೊಡೆಯುತಿದ್ದ ಕಾಲವಿತ್ತು' ಎಂದು ಹಿರಿಯರೊಬ್ಬರು ವಿವರಿಸಿದರು.

ಕೋಟೆಯೊಳಗೆ ಕೊಬರಿ ಮಿಠಾಯಿ

ಜನರ ಗುಂಪಿನ ಮಧ್ಯನೇ ಅನೇಕರು ತಿಂಡಿ ಮಾರಲು ತರುತಿದ್ದರು. ತಲೆಯ ಮೇಲೆ ಒಂದು ಹಲಗೆಯನ್ನಿಟ್ಟುಕೊಂಡು ಅದರ ಒಂದು ಮೂಲೆಗೆ ಸೀಮೆ ಯೆಣ್ಣೆ ಬುಡ್ಡಿ ಹಚ್ಚಿಸಿಕೊಂಡು 'ಕೊಬರಿ ಮಿಠಾಯ್' ಎಂದು ಕೂಗುತ್ತಾ ಅನೇಕರು ಬರುತ್ತಿದ್ದರು. ಸೌತೆಕಾಯಿ ಚೂರು, ಕಡಲೇಕಾಯಿ, ಬೆಲ್ಲ ಎಲ್ಲವನ್ನೂ ಮಾರಾಟಕ್ಕೆ ತರುತಿದ್ದರು. ಈಗಿನ ಕಾಲದಲ್ಲಿ ಅಂತಹ ವ್ಯಾಪಾರವನ್ನು ಕೋಟೆಯೊಳಗೆ ಬಿಡುವುದಿಲ್ಲ.

'ಬೈನಾಕ್ಯುಲರ್ ಬಿಸಿನೆಸ್'

ಬೈನಾಕ್ಯುಲರ್‌ಗೆ ಕಬ್ಬಿಣದ ಸರಪಣಿಯನ್ನೋ ಅಥವಾ ಹಗ್ಗವನ್ನೋ ಕಟ್ಟಿಕೊಂಡು ಅದರ ಇನ್ನೊಂದು ತುದಿಯನ್ನು ತಾವು ಬಲವಾಗಿ ಹಿಡಿದು ಕೊಂಡಿದ್ದು ಆ ಬೈನಾಕ್ಯುಲರ್ ಮೂಲಕ ಸಿಂಹಾಸನ ನೋಡಲು ಒಂದು ಸಲಕ್ಕೆ ೩ ಕಾಸಿನಂತೆ ವ್ಯಾಪಾರ ನಡೆಸುವವರೂ ಆಗಲೂ ಇದ್ದಾರೆ.

ವ್ಯಾಪಾರಿಗಳ ಉತ್ಸಾಹ

ದಸರಾ ಉತ್ಸವವೆಂದರೆ ಮೈಸೂರಿನಲ್ಲಿ ವ್ಯಾಪಾರಿಗಳಿಗೆ ಒಳ್ಳೆ ಉತ್ಸಾಹ. ಟೌನ್ ಹಾಲ್ ಮತ್ತು ಗಾಂಧಿ ಚೌಕದ ಬಳಿ ಶರಹೇವಾರಿ ವ್ಯಾಪಾರಗಾರರು ಬಂದು ಸೇರುತ್ತಾರೆ. ಜೋಪಡಿಗಳನ್ನು ಹಾಕಿಕೊಂಡು, ಒಳಗಡೆ ನಾಗಳಿಕೆ, ಆರುಕಾಲಿನ ಕುರಿ, ದಶಾವತಾರ ಮುಂತಾದ ಅದ್ಭುತಗಳನ್ನು ತೋರಿಸುವವರನ್ನೂ ಹಳೇ ಬಟ್ಟೆಗಳನ್ನು ಮಾರುವವರನ್ನೂ, ಎಣ್ಣೆಯಲ್ಲಿ ಕರಿದ ಜಿಲೇಬಿ, ಬತ್ತಾಸುಗಳನ್ನು ತಿನ್ನಿಸುವವರನ್ನೂ ಅಲ್ಲಿ ನೋಡಬಹುದು.

ಅರೆಬೆಂದ ದೋಸೆ ಬಿಸಿನೀರಿನ ಕಾಫಿಗೆ ಸುಗ್ಗಾಟ

ಹೋಟೆಲುಗಳ ವೈಖರಿಯನ್ನು ಬಣ್ಣಿಸಲು ಸಾಧ್ಯವೇ ಇಲ್ಲ. ಅರ್ಧ ಬೆಂದ ದೋಸೆ, ಇಡ್ಲಿಗಳನ್ನು, ಬಿಸಿನೀರಿನ ಕಾಫಿ ಗಳನ್ನು ಪಡೆಯಲು ಅದು ಎಷ್ಟು ನುಗ್ಗಾಟವಿರುತ್ತದೆ. ಅದೆಲ್ಲಾ ಅನುಭವಿಸಿದವರಿಗೇ ಗೊತ್ತು. ರೇಷನ್ ಇಲ್ಲದೆ ಸಾಮಾನು ಸುಲಭವಾಗಿ ದೊರೆಯುತಿದ್ದ ಕಾಲದಲ್ಲೇ ಬಹಳ ತೊಂದರೆಯಾಗುತ್ತಿದ್ದಾಗ ಈಗಿನ ಕಾಲದಲ್ಲಂತೂ ಹೇಳಲೇ ಬೇಕಾಗಿಲ್ಲ.

ಬಾಡಿಗೆಗೆ ದರ್ಬಾರ್ ಡ್ರೆಸ್

ದಸರಾ ಬಂದಿತೆಂದರೆ ಕೆಲವು ಅಂಗಡಿಗಳ ಮುಂದೆ 'ದರ್ಬಾರ್ ಡ್ರೆಸ್ ಬಾಡಿಗೆಗೆ' ಎಂಬ ಬೋರ್ಡನ್ನೂ ಅದರಲ್ಲಿ ನಗು ಬರುವಂತಹ ಚಿತ್ರಗಳನ್ನೂ ನೋಡಬಹುದು. ಮೊದಲು ಅಂತಹ ಬೋರ್ಡುಗಳು ಕೆಲವು ಜವಳಿ ಅಂಗಡಿಗಳ ಮುಂದೆ ಮಾತ್ರ ಇರುತ್ತಿದ್ದವು. ಈಗ ಶೇವಿಂಗ್ ಸೆಲೂನುಗಳ ಮುಂದೂ ನೋಡಬಹುದು. ದರ್ಬಾರ್ ನೋಡಲು ಹೋಗುವವರು ಆ ಉಡುಪಿಗಾಗಿ ಅಂಗಡಿಗಳ ಮುಂದೆ ಕ್ಯೂ ನಿಲ್ಲದೇ ಇರಲಾಗುತ್ತದೆ. ಸೈಜ್ ಸರಿ ಇಲ್ಲದಿರುವ ಅಂಗೀ ಪರಾಯಿಗಳನ್ನು ಹಾಕಿ ತಲೆಗೆ ಗುನ್ನಂಪಟ್ಟಿ ಅಂಟಿಸಿದರೆ ವೇಟಾ ಇಟ್ಟ ಕಳೆಹಿಸುತ್ತಾರೆ. ಸಾಧಾರಣವಾಗಿ ದಕ್ಷಿಣ ಭಾಗದಿಂದ ಬರುವ ಕೊಯಮುತ್ತೂರಿನ ರಾಜೇಂದ್ರ ದೇವಕೋಟಾ ಶಿವನಾಡ ಚೆಟ್ಟಿಯಾರ್. ಕ್ಯಾಲಿಕಟ್ಟಿನ ರಾಮನ್ ನಾಯರ್ ಮುಂತಾದವರು ಅವುಗಳನ್ನು ಹಾಕಿಕೊಂಡು ಹೋಗುವುದನ್ನು ಅನೇಕರು ನೋಡ ಬಹುದು.

ಪ್ರತಿ ಮನೆಯಲ್ಲೂ ಅತಿಥಿಗಳು

ದಸರಾ ಎಂದರೆ ಸಾಧಾರಣವಾಗಿ ಮೈಸೂರಿನಲ್ಲಿ ಪ್ರತಿಯೊಬ್ಬರ ಮನೆಗೂ ಅತಿಥಿಗಳು ಬಂದೇ ಬರುತ್ತಾರೆ. ಮೊನ್ನವಿನಿಂದ ಬಂದೋರು ಬೆಟ್ಟದ ಜಾತ್ರೆ ಆಗೋಗಂಟ ಇದ್ದು ಹೋಗುವರು. ಹಿಂದಿನ ಕಾಲದಲ್ಲಿ ಅತಿಥಿ ಸತ್ಕಾರವನ್ನು ಸಂತೋಷದಿಂದ ಮಾಡಬಹುದಾಗಿತ್ತು. ಈಗ ಆಹಾರಾಭಾವ ಜೋರಾಗಿದ್ದು ರೇಷನ್ ಪದ್ಧತಿ ಬಿಗಿಯಾಗಿರುವುದರಿಂದ ದೇವರೇ ಅತಿಥಿಗಳು ಬೇಡವಪ್ಪಾ ಎಂದೂ ಅನೇಕರು ಪ್ರಾರ್ಥಿಸುವುದೂ ಉಂಟು.

'ತಾಯಿನಾಡು'

ಚುನಾವಣೆ ವಾರ್ತೆಗಳು.

ಸ್ವತಂತ್ರ ಮತ್ತು ನ್ಯಾಯಬದ್ಧವಾದ ಚುನಾವಣೆಗೆ ಅವಕಾಶ ಕೊಡಿರಿ!

ಮುಂಬರುವ ಸಾರ್ವತ್ರಿಕ ಚುನಾವಣಾ ಕಾಲದಲ್ಲಿ ಯಾವ ಹೊಣೆ ಹೊರಬೇಕು ಎಂಬುದರ ಕುರಿತು ಮದ್ರಾಸಿನ ಪ್ರಧಾನರು ಮದ್ರಾಸು ನಗರದಲ್ಲಿ ಪ್ರಾಂತದ ಜಿಲ್ಲಾ ಕಲೆಕ್ಟರುಗಳ ಒಂದು ಪರಿಷತ್ತು ಕರೆಸಿದ್ದರು. ಆ ಸಮ್ಮೇಳನವನ್ನು ಉದ್ದೇಶಿಸಿ ಭಾಷಣ ಮಾಡುತ್ತ ಮದ್ರಾಸಿನ ಮುಖ್ಯ ಮಂತ್ರಿ ಶ್ರೀ. ಹಿ. ಎಸ್. ಕುಮಾರಸ್ವಾಮಿ ರಾಜಾರವರು, "ಸರಕಾರೀ ಆಡಳಿತ ಶಾಶ್ವತ ಯಂತ್ರಿಕ ಸೂತ್ರಗಳನ್ನು ಹಿಡಿದು ಜೀವ ಹಿಂಸೆ ಕರ್ತವ್ಯವನ್ನು ಸ್ಥಾಪಿಸಿ, ಯಾವುದೇ ರಾಜಕೀಯ ಇಲ್ಲವೆ ಪಕ್ಷೀಯ ಭಾವನೆಗಳಿಗೆ ಆಸ್ಪದ ಕೊಡದೆ ನಿಷ್ಪಕ್ಷಪಾತವಾಗಿ ನಿಮ್ಮ ಹೊಣೆಗಾರಿಕೆಯನ್ನು ಪೂರೈಸಬೇಕು. ಸರಕಾರದ ಸೇವಕರು ನೀವಿರುತ್ತೀರಿ ಎಂಬುದು ನಿಮ್ಮ ಮನಸ್ಸಿನಲ್ಲಿ ಪ್ರಧಾನವಾಗಿರಬೇಕು. ಯಾವ ಕಾಲಕ್ಕೂ ಕರ್ತವ್ಯ ಜಾಗೃತಿ ನುಡಿಯಬೇಡಿ. ಸ್ವತಂತ್ರ ಮತ್ತು ನ್ಯಾಯಬದ್ಧ ಚುನಾವಣೆಗೆ ಅವಕಾಶ ಮಾಡಿಕೊಡಿರಿ" ಎಂದರು.

ಮತದಾರರನ್ನು ವಾಹನಗಳಲ್ಲಿ ಕೊಂಡೊಯ್ಯಬಾರದು.

ಯಾವುದೇ ರಾಜಕೀಯ ಪಕ್ಷವು ಚುನಾವಣಾ ಕಾಲದಲ್ಲಿ ಮತದಾರರನ್ನು ಪೋಲಿಂಗ್ ಬೂತ್‌ಗಳಿಗೆ ವಾಹನಗಳಲ್ಲಿ ಕೊಂಡೊಯ್ಯಬಾರದು; ಕೊಂಡೊಯ್ದರೆ ಪೀಪಲ್ಸ್ ಆಕ್ಟ್ ಮೇರೆಗೆ ಏರುದ್ಧವಾಗಿ ಶಿಕ್ಷಿಸಿದೆ.

ಅಮೃತ ಕೌರ್‌ರವರ ಉಮೇದ್ವಾರಿಕೆ ಕಾಯಿದೆಶೀರ.

ಭಾರತದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರ್ ಇವರು ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಜಾ ಸಭೆಗೆ ಹಿಮಾಚಲ ಪ್ರದೇಶದಿಂದ ಉಮೇದ್ವಾರಿಕೆ ಅರ್ಜಿ ಹಾಕಿದ್ದರು. ಉಮೇದ್ವಾರಿಕೆ ಪತ್ರದಲ್ಲಿ ಅವರು ಸೂಚಿಸಿದ ಒಂದು ಕಲಮು ಪೀಪಲ್ಸ್ ಆಕ್ಟಿಗೆ ವಿರೋಧವೆಂದು ಪ್ರತಿ ಸ್ಪರ್ಧಿಗಳೊಬ್ಬರು ಆಕ್ಷೇಪವನ್ನು ಮುಂದೆ ತಂದಿದ್ದರು. ಇದೀಗ ರಿಟರ್ನಿಂಗ್ ಆಫೀಸರರು ರಾಜಕುಮಾರಿ ಅಮೃತ ಕೌರ್‌ರವರ ಉಮೇದ್ವಾರಿಕೆ ಕಾಯಿದೆಶೀರವಿಡೆಯೆಂದು ಸಾರಿರು ತರು. ಮೂಂಡಿ-ಮಹಾಸು ಕಾನ್ಸ್‌ಟಿಟ್ಯೂಯೆನ್ಸಿಯಿಂದ ಕಾಂಗ್ರೆಸ್ ಉಮೇದ್ವಾರರಾಗಿ ರಾಜಕುಮಾರಿ ಅಮೃತ ಕೌರ್‌ರವರು ಘೋಷಿತರಾದರು.

ಡಾ. ಪರಜೂರಿ ಉಮೇದ್ವಾರರಾಗಿ.

ಗಾಂಧಿ ಕೊಲೆ ನೊಕದ್ದಮೆಯ ವಿಚಾರಣೆಯಲ್ಲಿ ಪ್ರಧಾನ ವ್ಯಕ್ತಿಗಳಾಗಿದ್ದ ಡಾ. ಡಿ. ಎಸ್. ಪರಚೂರಿಯವರು ಮಧ್ಯಭಾರತ ಎಸೆಂಬ್ಲಿಗೆ ಮಹಾಸಭೆಯ ಕಡೆಯ ಉಮೇದ್ವಾರರಾಗಿ ಚುನಾವಣೆಯಲ್ಲಿ ಸ್ಪರ್ಧಿಸಲಿರುವರೆಂದು ತಿಳಿದುಬರುತ್ತದೆ.

ಮೂವ್ಯಂಕರರಿಗೆ ಪ್ರತಿಸ್ಪರ್ಧಿಗಳಿಲ್ಲ.

ಭಾರತ ಪಾರ್ಲಿಮೆಂಟಿನ ಸ್ಪೀಕರರಾದ ಶ್ರೀ. ಜಿ. ವಿ. ಮೂವ್ಯಂಕರರು ಅಹ್ಮದಾಬಾದ ಪ್ರಜಾಸಭೆಗೆ ಇರುವ ಎರಡು ಸ್ಥಾನಗಳಲ್ಲಿ ಒಂದು ಸ್ಥಾನಕ್ಕೆ ಕಾಂಗ್ರೆಸ್ ಟಿಕೇಟನಲ್ಲಿ ಉಮೇದ್ವಾರರಾಗಿ ನಿಲ್ಲಲಿದ್ದಾರೆ. ಆಪರ ಸ್ಥಾನಕ್ಕೆ ಯಾವುದೇ ರಾಜಕೀಯ ಪಕ್ಷದ ಹುರಿಯಾಳುಗಳು ಪ್ರತಿಸ್ಪರ್ಧಿಸುವುದಿಲ್ಲವೆಂದು ಕೇಳಿಬರುತ್ತದೆ. ಶ್ರೀ. ಮೂವ್ಯಂಕರರ ಪ್ರತಿಸ್ಪರ್ಧಿಯಾಗಿ ತಮ್ಮ ಕಡೆಯ ಉಮೇದ್ವಾರರನ್ನು ನಿಲ್ಲಿಸುವುದಿಲ್ಲವೆಂದು ಸೋಶಲಿಸ್ಟ್ ಪಕ್ಷವು ಈಗಾಗಲೇ ಪ್ರಕಟಿಸಿರುವುದು.

ನೆಹರುಗಳು ಅಲ್ಲಹಾಬಾದದಿಂದ ನಿಲ್ಲುವರೇ?

ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಜಾಸಭೆಗೆ ಹೊರಯೂಳಾಗಿ ಪ್ರಧಾನಿ ನೆಹರೂರವರು ಅಲ್ಲಹಾಬಾದದಿಂದ ನಿಲ್ಲಬಹುದೆಂದು ನಿರೀಕ್ಷಿಸಲಾಗಿದೆ. ಆದರೆ, ಅವರ್ಟು ಈ ವರೆಗೆ ಕಾಂಗ್ರೆಸ್ ಟಿಕೇಟಿಗೆ ಅರ್ಜಿ ಮಾಡಿದುದಿಲ್ಲ.

ಚುನಾವಣೆಯ ಖರ್ಚು ೧೦ ಕೋಟಿಯಷ್ಟಾಗಬಹುದು.

ಮುಂಬರುವ ಭಾರತದ ಸಾರ್ವತ್ರಿಕ ಚುನಾವಣೆಗಳಿಗೆ ೨೩ ಲಕ್ಷ ಬೆಲೆಟ್ ಪೆಟ್ಟಿಗೆಗಳು ಉಪಯೋಗಿಸಲ್ಪಡುವವು. ಪ್ರತಿಯೊಂದು ಬೆಲೆಟ್ ಪೆಟ್ಟಿಗೆ ತಯಾರಿಕೆಗೆ ೨೫ ರೂಪಾಯಿಯ ವೆಚ್ಚ ತಗಲುವುದು. ಈ ಪೆಟ್ಟಿಗೆಗಳು ೨೦ ವರ್ಷಗಳ ವರೆಗೆ ಬಾಳಿಕೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಚುನಾವಣೆಗೆ ಸುಮಾರು ೧೧ ಕೋಟಿ ರೂಪಾಯಿಯಷ್ಟು ಖರ್ಚು ತಗಲಬಹುದೆಂಬು ಅಂದಾಜುಮಾಡಲಾಗಿದೆ.

ಭಾಷಾವಾರು ಪ್ರಾಂತಗಳು.

ಲೇ:-ಶ್ರೀ ಕೋದಂಡರಾಯರು, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ.

ಶಾಸ್ತ್ರವ ವಿಷಯಗಳು ಸರ್ಕಾರದ ಮೇಲೆ ಪರಿಣಾಮ ಬೀರಬಲ್ಲವೇ ಹೊರತು ಉಪವಾಸಗಳಲ್ಲವೆಂದು ಪ್ರಧಾನಿ ನೆಹರೂ ಹೇಳಿರುವುದು ಬಹು ಸಮಂಜಸವಾಗಿದೆ. ರಾಜಕೀಯ ಉಪವಾಸಗಳು ಪೂರ್ತಿಯಾಗಿ ನಿಂತುಹೋಗಬೇಕು. ಪ್ರಜಾಪ್ರಭುತ್ವ ಮತ್ತು ಉಪವಾಸಗಳು ಒಂದಾಗುವುದಿಲ್ಲ.

ಆದರೆ ಪಂ|| ನೆಹ್ರೂರವರು 'ಭಾಷಾವಾರು ಪ್ರಾಂತ'ಗಳಿಗೆ ಒಪ್ಪಿಗೆಯಿತ್ತು ಅವುಗಳ ರಚನೆಗೆ ನಿಯಮಾವಳಿಗಳನ್ನು ಸೂಚಿಸಿರುವುದು ವಿಷಾದಕರ ಸಂಗತಿ. ಈ ಗ್ರೆವಾದಿಗಳು ಅವಸರಪಟ್ಟಿ ಈ ನಿಯಮಾವಳಿಗಳಿಗೊಳಪಡಬಹುದು. ಇದರಿಂದ ಭಾರತ ಪಾಕ್ತುಕಾಕಿಸ್ತಾನಗಳಂತಹ ವಿಷಾದ ಕಥೆಯೇ ಮತ್ತೆ ಭಾರತದಲ್ಲಿ ಜರುಗಬಹುದು.

ಭಾರತದ ರಾಜ್ಯಾಂಗದಲ್ಲಿ 'ಸ್ಟೇಟ್ ಲಿಸ್ಟ್'ನಲ್ಲಿ ಪಟ್ಟಿ ಮಾಡಿರುವಂತಹ ನ್ಯಾಯ, ಶಿಸ್ತು, ವ್ಯವಸಾಯ ಮುಂತಾದ ವಿಷಯಗಳನ್ನು ನೋಡಿಕೊಳ್ಳುವಂತಹ ಆಡಳಿತದ ಯೂನಿಟ್ಟುಗಳೇ ಪ್ರಾಂತಗಳು. ಪ್ರಾಯೋಗಿಕವಾಗಿ ಇವನ್ನೂ ಕೂಡಾ ಕೇಂದ್ರೀಕೃತವಲ್ಲದಿದ್ದರೂ, ಹೆಚ್ಚು ಹೆಚ್ಚು ಸುಸಂಘಟಿತವಾಗಿ ಮಾಡಲಾಗುತ್ತಿದೆ. ಒಂದು ಸಂಸ್ಥಾನದಲ್ಲಿನ ಪ್ರಜೆಗಳ ಮತ್ತು ಒಂದು ಭಾಷೆಯ ನಡುವಣ ಸಂಬಂಧವಾದರೂ ಸಹಜವಾಹುದಲ್ಲ. ಹಕ್ಷಿಣ ಆಫ್ರಿಕದಲ್ಲಿನಂತೆ ಸಾಮಾನ್ಯ ವರ್ಣ, ಜಾತಿ ಅಥವಾ ವಿಜಾತಿ, ಗಂಡಸು ಅಥವಾ ಹೆಂಗಸು, ಗೋಧಿ ಅಥವಾ ಅಕ್ಕಿ, ಪೇಟ ಅಥವಾ ಟೋಪಿ, ವ್ಯವಸಾಯ ಅಥವಾ ಕೈಗಾರಿಕೆ, ಗದ್ಯ ಅಥವಾ ಪದ್ಯ, ವಿಜ್ಞಾನ ಅಥವಾ ಕಲೆ ಇವುಗಳ ಸಾಮಾನ್ಯತೆಯ ಮೇಲೆ ಒಂದು ಪ್ರಾಂತ ರಚಿಸುವುದರಲ್ಲಿ ಎಷ್ಟು ನ್ಯಾಯವಿದೆಯೋ ಒಂದು ಸಾಮಾನ್ಯ ಭಾಷೆಯ ಮೇಲೆ ಆಡಳಿತ ಸಂಸ್ಥಾನ ರಚಿಸುವುದೂ ಅಷ್ಟೇ ನ್ಯಾಯವಾಗಿದೆ! ಮೇಲೆ ತಿಳಿಸಿದ ಪ್ರತಿಯೊಂದು ವಿಷಯವೂ ಅನೇಕ ವ್ಯಕ್ತಿಗಳಿಗೆ ಸಾಮಾನ್ಯವಾದುದೇ ಆಗಿದೆ. ಅವುಗಳ ಅಭಿವೃದ್ಧಿಗೆ ವಿಶೇಷ ಸಂಸ್ಥೆಗಳು ಅಗತ್ಯವಿರಬಹುದಾಗಿದೆ. ಒಂದು ಭಾಷೆಯ ಅಭಿವೃದ್ಧಿಗೆ ಒಂದು "ಸಾಹಿತ್ಯ ಅಕಾಡೆಮಿ" ಬೇಕಾಗಿರಬಹುದು. ಆದರೆ ಶಿಸ್ತು, ನ್ಯಾಯ, ಆಹಾರ ಮುಂತಾದ ವಿಷಯಗಳನ್ನು ನೋಡಿಕೊಳ್ಳುವ ಆಡಳಿತ ಪ್ರಾಂತ ಬೇಕಾಗಿಲ್ಲ.

ಭಾಷಾವಾರು ಪ್ರಾಂತಗಳಲ್ಲಿ ಭಾಷಾ ಜಘಳಗಳು ಹುಟ್ಟುವುದರಿಂದಲೂ, ಆಡಳಿತಗಾರರ, ಜನರ ನಡುವೆ ಸಮೀಪ ಸಂಬಂಧ ಏರ್ಪಡುವುದರಿಂದಲೂ, ಆಡಳಿತಗಾರರ, ಜನರ ನಡುವೆ ಸಹಿಷ್ಣು ಸಂಬಂಧವಿರುವುದರಿಂದಲೂ, ಅವುಗಳಲ್ಲಿ ಪ್ರಜಾ ಪ್ರಭುತ್ವ ಹೆಚ್ಚು ಪರಿಣಾಮಕಾರಿಯಾಗುವುದೆಂದು ಹೇಳಲಾಗಿತ್ತು. ಆದರೆ ಕೇಂದ್ರ? ಪಾರ್ಲಿಮೆಂಟ್ ಸದಸ್ಯರಲ್ಲಿ ಸಾಮಾನ್ಯ ಭಾಷೆಯಿರದಿದ್ದರೆ ಕೇಂದ್ರವು ಪ್ರಾಂತಗಳಿಗಿಂತ ಕೀಳೆಂದಾಯಿತು. ಆದರೆ ಕೇಂದ್ರದಲ್ಲಿನ ವಿಷಯಗಳ ಪಟ್ಟಿ 'ಸ್ಟೇಟ್-ಲಿಸ್ಟ್'ಗಿಂತ ಕೀಳಲ್ಲ. ಇದರ ಬದಲು ಪಾರ್ಲಿಮೆಂಟಿನ ಸದಸ್ಯರು ಒಂದೇ ಭಾಷೆಯಲ್ಲಿ ಮಾತನಾಡಿ ರಾಷ್ಟ್ರ ಭಾಷೆಯನ್ನು ಹೆಚ್ಚಾಗಿ ಭಾರತದ ಜನರು ಕಲಿತರೆ ಅನಪೇಕ್ಷ ಪ್ರಾಂತ ಶಾಸನ ಸಭೆಗಳಲ್ಲೂ ಉಪಯೋಗಿಸಬಹುದಲ್ಲವೇ? ಹೀಗೆ ಹೂಡಿದರೆ ಭಾಷಾವಾರು ಪ್ರಾಂತಗಳ ಏಕಮಾತ್ರ ನ್ಯಾಯ ಪೂರೈಸುವಾಗುವುದು.

ಬೆಲ್ಜಿಯಂ ಮತ್ತು ಸ್ವಿಟ್ಜರ್ಲೆಂಡ್‌ಗಳಲ್ಲಿ ನಾನಾ ಭಾಷೆಗಳಿದ್ದೂ ಪ್ರಜಾಪ್ರಭುತ್ವ ಮತ್ತು ಸಂಸ್ಕೃತಿಗಳು ಉಳಿದು ಅಭಿವೃದ್ಧಿ ಹೊಂದಿದವು. ಆದರೆ ನಾನಾ ಭಾಷಾ ಸಂಸ್ಥಾನಗಳಿರುವ ಭಾರತದಲ್ಲಿ ಅವುಗಳಿಗೆ ಅಪಾಯದ ಪರಿಸ್ಥಿತಿ!

ಮುಖ್ಯವಾಗಿ, ಭಾಷಾವಾರು ಪ್ರಾಂತಗಳು ಭಾರತದ ಒಕ್ಕೂಟಕ್ಕೆ ಅದರ ಶಾಂತಿ, ಮುನ್ನಡೆಗಳಿಗೆ ಒಳ್ಳೆಯದರ ಬದಲು ಕೆಟ್ಟದನ್ನೇ ಪೂಡುವ ಸಂಭವವಿದೆ. ಎಂತಹ ಸಂದರ್ಭಗಳಿಂದಲೂ ತೊಂದರೆಯೇ ಇಲ್ಲದಿದ್ದರೂ ಇದ್ದರೆ ಆ ಮೇಲೆ ಯೋಚಿಸುವುದಕ್ಕಿಂತ ಈಗಲೇ ಎಚ್ಚರಿಸುವುದು ಲೇಸು.

ರಾಜಾಜಿ ರಾಜಿನಾಮೆ.

ಭಾರತದ ಗೃಹ ಮಂತ್ರಿ ಶ್ರೀ. ಸಿ. ರಾಜಗೋಪಾಲಾಚಾರಿಯವರು ಅಕ್ಟೋಬರ್ ಅಂತ್ಯದಲ್ಲಿ ತಮ್ಮ ಅಧಿಕಾರದಿಂದ ನಿವೃತ್ತರಾಗುವರೆಂದು ಖಚಿತವಾಗಿ ತಿಳಿದುಬಂದಿದೆ.

ರಾಜಾಜಿಯವರು ಹೋದ ವರ್ಷ ಜುಲೈ ತಿಂಗಳಲ್ಲಿ ಕೇಂದ್ರ ಮಂತ್ರಿ ಮಂಡಲಕ್ಕೆ ಸೇರಿ, ಆ ವರ್ಷ ಡಿಸೆಂಬರ್ ತಿಂಗಳ ವರೆಗೂ ಪೋರ್ಟ್‌ಫೋಲಿಯೋ ಇಲ್ಲದ ಮಂತ್ರಿಗಳಾಗಿದ್ದರು. ಅನಂತರ ಅವರು ಹೋಂ ಮಂತ್ರಿಗಳಾದರು.

ಹೋದ ವರ್ಷ ಅಕ್ಟೋಬರ್ ತಿಂಗಳಲ್ಲೇ ಅವರು ರಾಜಕೀಯದಿಂದ ನಿವೃತ್ತಿ ಪಡೆಯಲು ನಿರ್ಧರಿಸಿದ್ದರು. ಆದರೆ, ಕಳೆದ ಡಿಸೆಂಬರ್‌ನಲ್ಲಿ ಸರ್ದಾರ್ ಪಟೇಲರು ನಿಧನರಾದುದರಿಂದ, ರಾಜಾಜಿಯವರನ್ನು ಬಿಟ್ಟು ಕೊಡಲು ಪ್ರಧಾನಿ ನೆಹ್ರೂರವರಿಗೆ ಸಾಧ್ಯವಾಗಲಿಲ್ಲ. ಮುಂದಿನ ವಾರ ಪಾರ್ಲಿಮೆಂಟಿನಲ್ಲಿ ಪತ್ರಿಕಾ ನುಸುದಿಯ ತೃತೀಯ ಪರಿಷ್ಕರಣವಾದ ನಂತರ, ರಾಜಾಜಿಯವರು ಪಾರ್ಲಿಮೆಂಟಲ್ಲಿ ಬೀಳ್ಕೊಡುವ ಭಾಷಣ ಮಾಡುವರು.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಖಚೇರಿ:-ಹೊಸ ಡೆಲ್ಲಿ.

52-23 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲ್‌ಖಾನ್. ಡಾ|| ಎಂ. ಎ. ಅನ್ಸಾರಿ.

Transacts:--LIFE, FIRE, MOTOR and MARINE.

ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಅಂಬೇಡ್ಕರ್ ರಾಜಿನಾಮೆ.

ಡಾ. ಅಂಬೇಡ್ಕರರು ತಾ. ೨೭ ರಲ್ಲಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು, ಪಾರ್ಲಿಮೆಂಟ್ ಅಧಿವೇಶನ ಮುಕ್ತಾಯವಾದೊಡನೆ ತಮ್ಮನ್ನು ಅಧಿಕಾರದಿಂದ ಬಿಟ್ಟುಕೊಡಬೇಕೆಂದು ಕೇಳಿಕೊಂಡಿರುವುದಾಗಿ ಗೊತ್ತಾಗಿದೆ. ಡಾ. ಅಂಬೇಡ್ಕರರು ರಾಜಿನಾಮೆ ಕೊಟ್ಟಿರುವುದು ಮುಖ್ಯವಾಗಿ ಅಸ್ವಸ್ಥತೆ ಕಾರಣಗಳಿಂದ. ಅಕ್ಟೋಬರ್ ಮಧ್ಯಭಾಗದಲ್ಲಿ ಅವರು ಬೊಂಬಾಯಿ ನರ್ಸಿಂಗ್ ಹೋಂ ಒಂದಕ್ಕೆ ಸೇರಿ ಚಿಕಿತ್ಸೆ ಪಡೆಯುವರು. ಡಾ. ಅಂಬೇಡ್ಕರರು ಇನ್ನು ಮುಂದೆ ದೆಹಲಿಯಲ್ಲೇ ನೆಲೆಸಿ ಸುಪ್ರೀಂ ಕೋರ್ಟಿನಲ್ಲಿ ವಕೀಲರಾಗಿ ವೃತ್ತಿ ನಡೆಸಲು ಉದ್ದೇಶಿಸಿದ್ದಾರೆ. ಅವರು ಬರಲಿರುವ ಚುನಾವಣೆಗಳಲ್ಲಿ ಸ್ಪರ್ಧಿಸುವರು.

ಹೊಸ ಸಚಿವಕವಿಲ್ಲ.

ಕೇಂದ್ರ ಮಂತ್ರಿಮಂಡಲಕ್ಕೆ ಈಗ ಹೊಸ ಮಂತ್ರಿಗಳಾರನ್ನೂ ನೇಮಕವೂ ಮಾಡುವುದಿಲ್ಲವೆಂದು ಗೊತ್ತಾಗಿದೆ. ಆಹಾರ ಮಂತ್ರಿ ಮುನ್ಷಿಯವರೇ ನ್ಯಾಯಾಂಗ ಶಾಖೆಯನ್ನು ವಹಿಸಿಕೊಳ್ಳುವರೆಂದು ಗೊತ್ತಾಗಿದೆ.

ನೋಟೀಸಿಗೆ ಉತ್ತರ.

ತಾ೫-೧೦-೫೧ರ 'ಕೊಡಗು' ಪತ್ರಿಕೆಯಲ್ಲಿ ನಾನು ಪ್ರಕಟಿಸಿದ್ದ ಭೂವಿವಾದ ಮೊರಾಟದ ವಿಚಾರದಲ್ಲಿ ಶ್ರೀ. ಸಿ. ಜಿ. ಕಾರ್ಯಪ್ಪನವರು ಕೊಟ್ಟ ತಡೆನೋಟೀಸನ್ನು ನೋಡಿದೆನು. ನಾನು ಈ ಸ್ವತ್ತನ್ನು ಮೊರಾಟು ಮಾಡುವವರು ಬೇರೊಂದು ಹೊಸ ಆಸ್ತಿಯನ್ನು ತೆಗೆಯಲಿಕ್ಕಾಗಿಯಾದ ಕಾರಣ ಇದಕ್ಕೆ ಆತಂಕಿಸುವ ಹಕ್ಕು ಅದರಿಗಿರುವದಿಲ್ಲ. ನ್ಯಾಯವಲ್ಲದ ಅಪರ ವಿರೋಧದಿಂದ ಉಂಟಾಗುವ ಕಷ್ಟನಷ್ಟಗಳಿಗೆ ಅವರೇ ಜವಾಬ್ದಾರರಾಗಿರಬೇಕೆಂದು ಈ ಮೂಲಕ ತಿಳಿಸಿರುತ್ತೇನೆ.

ಚೆಪ್ಪುಡಿರ ಎ. ಪೊನ್ನಪ್ಪ,
ಪೊನ್ನಂಪೇಟೆ.

ಪ್ರಕಟಣೆ.

ಉತ್ತರ ಕೊಡಗು ಸೋಮವಾರಪೇಟೆ ನಾಡು ಬಿಳಿಗೇರಿ ಗ್ರಾಮದ ಬಾಚಿನಾಡು ಪೌತಿ ಕಾಳಪ್ಪನವರ ಮಗ ದೊಡ್ಡ ಪೂವಯ್ಯನಾದ ನಾನು, ತಾ೧೯-೯-೧೯೫೧ರ "ಕೊಡಗು" ಪತ್ರಿಕೆಯಲ್ಲಿ ಬಾಚಿನಾಡು ಕುಶಾಲಪ್ಪ ವಗೈರೆ ಪ್ರಕಟಿಸಿರುವ ವಿಷಯಗಳನ್ನು ಓದಿದೆನು. ಆದರೆ ಈ ಜನರಿಗೆ ನನ್ನ ಸ್ಥಿರ ಚರ ಆಸ್ತಿಗಳ ಮೇಲೆ ಯಾವ ಹಕ್ಕು ಬಾಧ್ಯತೆಗಳಾಗಲೀ ಇರುವುದಿಲ್ಲ. ಇವರುಗಳು ನಾಹಕ್ಕಾಗಿ ದುರಾಶೆಯಿಂದ ವಕ್ಷಗೆ ವೃಥಾ ತೊಂದರೆ ಕೊಡಬೇಕೆಂಬ ಇರಾದೆಯಿಂದ ಆ ಮೇರೆ ಪ್ರಕಟಿಸಿರುವುದಾಗಿದೆ. ನನ್ನ ಸ್ಥಿರ ಚರ ಆಸ್ತಿಗಳನ್ನು ಪರಾಧೀನ ಮಾಡಲು ಇವನಿಗೆ ಇರುವ ಹಕ್ಕನ್ನು ಆಟಂಕಿಸುವುದಕ್ಕೆ ಇವರುಗಳಿಗೆ ಯಾವ ಅಧಿಕಾರವೂ ಇರುವುದಿಲ್ಲ.

ಬಾಚಿನಾಡು ದೊಡ್ಡ ಪೂವಯ್ಯ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕು, ಲಿಮಿಟೆಡ್., ಮಡಿಕೇರಿ.

ತಾ. ೧-೧೦-೫೧.

ಪ್ರಕಟಣೆ.

'3½% Season Deposit'
'ಶೇಕಡ ಸಾಲಿಯೂನ 3½
ದರದ ಠೇವಣಾತಿ.

ಪ್ರಾಂತೀಯ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನಲ್ಲಿ ಶೇಕಡ ಸಾಲಿಯೂನ ಮೂರುವರೆ ಬಡ್ಡಿ ದರದಲ್ಲಿ ಅರು ತಿಂಗಳ ಅವಧಿಯ ಠೇವಣಾತಿ (Season Deposit) ಗಳನ್ನಿಡಲು ಸದಸ್ಯರಿಗೂ ಹಾಗೂ ಸದಸ್ಯರೇತರಿಗೂ ನವಂಬರು ತಾ. ಹದಿನೈದರ (೧೫-೧೧-೫೧)ರ ವರೆಗೆ ಎಡೆಕೊಡಿಬಹುದೆಂದು ತೀರ್ಮಾನಿಸಲಾಗಿದೆ. ಈ ಸಂದರ್ಭವನ್ನು ಸರ್ವರೂ ಉಪಯೋಗಿಸಿಕೊಳ್ಳಬೇಕಾಗಿ ಕೋರಲಾಗಿದೆ. ಕೆ. ಪಿ. ಅಪ್ಪಯ್ಯ,
ತಾ. ೧-೧೦-೫೧. ಪ್ರೆಸಿಡೆಂಟ್.

ಪ್ರಕಟಣಾ ಪತ್ರಿಕೆ.

ಉತ್ತರಕೊಡಗು ತಾಲೂಕು ಸೋಮವಾರಪೇಟೆ ನಾಡು ಬಿಳಿಗೇರಿ ಗ್ರಾಮದ ಬಾಚಿನಾಡಂಡ ಕುಶಾಲಪ್ಪ, ಮುತ್ತಣ್ಣ, ಚಿಣ್ಣಪ್ಪ, ಮೂಜಯ್ಯ, ಬಿ. ಎಂ. ಪೂವಯ್ಯ, ಕಿ. ಕೆ. ಕುಟ್ಟಪ್ಪ, ಮುತ್ತಪ್ಪ, ಮೂದಪ್ಪ ಸಹ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ-ನಮ್ಮ ಬಾಚಿನಾಡಂಡ ಕೊಳಪ್ಪನ ಮಗ ಪೂವಯ್ಯನ ಪುತ್ರ ಸಂತಾನವಿಲ್ಲದ್ದರಿಂದ ತನ್ನ ಹೆಸರಲ್ಲೂ ಜಮೀನು ಮಾಡಿದು ಬರುವ ಸ್ಥಿರ ಆಸ್ತಿಗಳನ್ನು ಶುದ್ಧ ಕ್ರಯಕ್ಕೆ ಮಾರಾಟ ಮಾಡುವುದಾಗಿ ತಿಳಿಸುತ್ತೇವೆ. ಸದರಿ ಪೂವಯ್ಯನವರ ಹೆಸರಿನಲ್ಲಿರುವ ಪೂರ್ತಿ ಸ್ಥಿರ ಚರ ಸ್ವತ್ತಿಗೆ ಸಹ ನಾವು ಕುಟುಂಬಸ್ಥರೆಲ್ಲ ಹಕ್ಕುದಾರರಾಗಿರುತ್ತೇವೆ. ಆದುದರಿಂದ ಯಾರಾದರೂ ಸದರಿಯವರ ಹೆಸರಲ್ಲಿರುವ ಸ್ಥಿರ ಸ್ವತ್ತುಗಳನ್ನು ಶುದ್ಧ ಕ್ರಯ, ಬೋಗ್ಯ, ವಗೈರೆಗೆ ತೆಗೆದುಕೊಳ್ಳಕೂಡದು. ಹಾಗೇನಾದರೂ ನಮ್ಮ ಕುಟುಂಬದವರ ಒಪ್ಪಿಗೆ ಇಲ್ಲದೆ ಕ್ರಯಕ್ಕೆ ತೆಗೆದುಕೊಂಡರೆ ಅಗ್ಗೆ ಕಷ್ಟನಷ್ಟಗಳಾಗುವ ಸರ್ವ ಕಷ್ಟನಷ್ಟಕ್ಕೂ ಸಹ ಕ್ರಯಕ್ಕೆ ತೆಗೆದುಕೊಂಡವರು ಜಾಧ್ಯರಾಗಕಕ್ಕದ್ದು, ಎಂಬದಾಗಿ ಈ ಮೂಲಕ ತಿಳಿಯಪಡಿಸಿರುತ್ತೇವೆ.

18-9-51. ಕುಟುಂಬಸ್ಥರ ಪರ,
ಬಿ. ಕುಶಾಲಪ್ಪ.
3-3

ಓದುಗರ ಓಲೆಗಳು

ಮಲೇರಿಯಾ ಕಾಯಿಲೆ.

ತಾ. 7-9-51ರ ಕೊಡಗು ಪತ್ರಿಕೆಯನ್ನು ಓದಿ ನೋಡಿದೆವು. ಅದರಲ್ಲಿ 'ರಾಜ' ಎಂಬವರು ನಾಪೋಕ್ಲಿನ ಮಲೇರಿಯಾ ಇನ್ಸ್‌ಪೆಕ್ಟರರ ವಿಚಾರ ಬರೆಹ ಅಪಪ್ರಚಾರವನ್ನು ನೋಡಿದೆವು. ಇವನ್ನು ಬರೆಹ 'ರಾಜ' ಎಂಬವರು ಯಾರು ಎಂದು ನಾನು ತಿಳಿಯಲಾರೆ. ಆದರೆ ಅವರು ತನ್ನ ಜವಾಬ್ದಾರಿಕೆಯನ್ನು ತಿಳಿದು ಕೊಳ್ಳಲಾರದೆ ಇತರ ವೈದ್ಯರ್ ಮೃಕ್ಕೆ ಯೂಗಿರಬಹುದೆಂಬ ಯೋಚಿಸುತ್ತೇನೆ. ಅಪಪ್ರಚಾರಗಳು ನಾಡಿಕೆಯಲ್ಲಿವೆ. ಅವುಗಳನ್ನು ನೋಡುವಾಗ ಕೆಲವು ಮಟ್ಟಿಗೆ ಯೆ ನಿಜಾಂಶವಿರಬೇಕು. ಆದರೆ 'ರಾಜ' ಎಂಬವರು ಬರೆದುಹರಲ್ಲಿ ಎಳ್ಳಷ್ಟು ನಿಜಾಂಶವಿಲ್ಲ. ಆಡುಕಾರಣ ಅದಕ್ಕೆ ಸಮ್ಮಂದ ಪಟ್ಟ ಅಧಿಕಾರಿಯು ಸರಿಯಾದ ಜವಾಬನ್ನು ಕೊಡಬಹುದಿತ್ತು. ಇದಕ್ಕಾಗಿ ಕಳೆದ ಪತ್ರಿಕೆಯನ್ನು ಪೂರ್ತಿಯಾಗಿ ಓದಿ ನೋಡಿಪೆವು. ಯಾವಡೊಂದೂ ಜವಾಬು ಕಾಣಲಿಲ್ಲ. ಆವಕೆ ತಿದಿರೆ ಗೋಚರವಲ್ಲದೆ ಊರುವೆದನ್ನು ತೋಡುವಾಗೆ ಕರ್ತವ್ಯ ಶೀಲತೆಯೂ, ಮತ್ತು ವಿಶಾಲ ಬುದ್ಧಿಯೂ ಅವರಲ್ಲಿ ಧಾರಾಳವಾಗಿ ಇವೆ ಎಂದು ನಾನಾಗಿ ಗೊತ್ತಾಗುತ್ತದೆ. ನಾಪೋಕ್ಲಿನಲ್ಲಿ ಮಲೇರಿಯಾ ಕಾಯಿಲೆಯು ಕವಿಮಿಯಾಗಿಲ್ಲವೆಂದೂ ಯಾವ ಅಧಾರದ ಮೇಲೆ ಹೇಳಿದರೋ ನಾನು ತಿಳಿಯೆ. ಆಪರೆ ನಾಪೋಕ್ಲು ಪಟ್ಟಣದಲ್ಲಿ ಮಲೇರಿಯಾ ಜ್ವರವು ಬಹು ಕವಿಮಿ ಎಂದು ಇಲ್ಲಿಯ ಮೆಡಿಕಲ್ ಆಫೀಸರವರಿಂದ ತಿಳಿಯುತ್ತೇನೆ ಟೌನಿನಲ್ಲೇಕೂ, ಅದರ ಹೆಸರೇ ಉಳಿದಿರುವುದಿಲ್ಲ. ವ್ಯವಸಾಯ ಸಮಯದಲ್ಲಿ ಎಲ್ಲೆಲ್ಲೂ ಊರಪಾರಿಯಂತೆ ತಲೆದೋರುತ್ತಿದ್ದ ಈ ಕಾಯಿಲೆಯು ಈಗ ಶೇಕಡ ಐದರಷ್ಟಾದರೂ ಇದೆಯೇ ಎಂಬುದು ಸಂಶಯಾಸ್ಪದವಾಗಿದೆ. ಅಧಿಕಾರಿಯು ಮನಸ್ಸು ಮಾಡಿದರೆ ಒಂದು ಕೆಸರು ಗುಂಡಿ ಇದೆ ಎಂದು ಹೇಳಿರುತ್ತಾರೆ. ಅದನ್ನು ತೋರಿಸಿಕೊಡುವುದೇ? ನಾನು ವಿಚಾರಿಸಿ ನೋಡಿದಲ್ಲಿ ಅವರ ಮನೆಯ ಮುಂದೆ ರಾಜಾರಸ್ತೆ. ಅಡಿಕೆ ಆಜೆ ಪೊಲೀಸು ಲೈನು ಇರುತ್ತೆ. ಪೊಲೀಸು ಲೈನು ಎತ್ತರದಲ್ಲಿರುವುದರಿಂದ ಮಳೆ ಬೀಳುವ ಸಮಯದಲ್ಲಿ ಅಲ್ಲಿ ಬಿದ್ದ ಮಳೆ ನೀರು ಕೊಳೆತು ನೀರೊಡನೆ ಸೇರಿ ರಸ್ತೆಯ ಚರಂಡಿಗೆ ಬಂದು ಬೀಳುತ್ತದೆ. ಆ ಜಾಗದಲ್ಲಿ ಕೆಲವು ಸಮಯ ಕೆಸರಾಗಿ ಇರುತ್ತೆ. ಮತ್ತು ಕೆಲವು ಹಂದಿಗಳು ಅಲ್ಲಿ ಇದ್ದು ಹೊರಳಾಡುವುದೂ ಉಂಟು. ಇದು ಸದಾ ಇರುವ ಸಂದರ್ಭವಿಲ್ಲ. ಇರುವುದಾದರೆ ಅವುಗಳ ಮೇಲೆ ಜವಾಬ್ದಾರಿಕೆ ಮಲೇರಿಯಾ ಅಧಿಕಾರಿಗಳಿಗೆ ಇಲ್ಲವುದಿಲ್ಲ ರಸ್ತೆಯು ಬದಿಯಲ್ಲಿರುವ ಚರಂಡಿಗಳನ್ನು ಸದಯಾಗಿ ಇಟ್ಟುಕೊಳ್ಳುವ ಇಲಾಖೆಯು ಬೇರೆ ಇದೆ. ಅಲ್ಲದೆ ಹಂದಿಗಳು ಯಾವಾಗಲೂ ಬೀಳುವ ಕೆಸರು ಗುಂಡಿಯಲ್ಲಿ ಸೊಳ್ಳೆಯು ಹುಟ್ಟುತ್ತದೆಯೆಂದು ಏನೂ ತಿಳಿಯದ 'ರಾಜ' ಎಂಬವರು ಮಾತ್ರ ಹೇಳುವುದಲ್ಲದೆ ಬೇರೆ ಯಾರೂ ಹೇಳಲಿಕ್ಕಿಲ್ಲ ಕಡೇಪಕ್ಷ ಅಧಿಕಾರಿಗಳು ಬೇಡದ ಕೆಲಸಗಳನ್ನು ಮಾಡುತ್ತಿರುವರೆಂದೂ ಅಷ್ಟಕ್ಕಾಪತ್ರಿಕೆಗಳ ಸ್ಥಾನ ಬಿಡಬೇಕೆಂದೂ ಬರೆದಿರುತ್ತಾರೆ. ಇದು ಸ್ವಪ್ರಯೋಜನ ದೃಷ್ಟಿಯಿಂದಲೋ ಯಾ ಅಧಿಕಾರಿಗಳ ಹೆಸರನ್ನು ಅಪಪ್ರಚಾರಪಡಿಸಲಿಕ್ಕಾಗಿಯೋ ಎಂದು ತೋರುತ್ತದೆ. ಅವರು ಟೌನಿನಲ್ಲಿ ಯಾರೊಬ್ಬರ ಗೋಚರಕ್ಕೂ ಹೋಗದೆ ಎಲ್ಲರೂಪದೆಯೂ ಸಮಭಾವದಿಂದ ವಿಂಗಡಿತವಾಗಿ, ತಮ್ಮ ಸ್ವಂತ ಉಚಿತ ಕಾರ್ಯಗಳಲ್ಲಿ ನಿರತರಾಗಿ ಸರ್ವರೂ ನೆಚ್ಚುವಂತೆ ಕೆಲಸ ಮಾಡುತ್ತಲಿದ್ದಾರೆ.

'ತಿಳಿದ ನಾಪೋಕ್ಲು ಟೌನು ವಾಸಿ'

ಸಂಯೋಜನಾವಾದಿಗಳಲ್ಲಿ.

ತಾವು ೧೯-೯-೫೧ರ 'ಜನ್ಮಭೂಮಿ' ಪತ್ರಿಕೆಯಲ್ಲಿ ಬರೆದ ಬಾತ್ಮಿಯನ್ನು ಚೆನ್ನಾಗಿ ಓದಿದೆ. 'ಕಳೆಗೆ ಬಿದ್ದರೂ ಹೂಗಣ ಮೇಲೆ' ಮತ್ತು 'ಗಟ್ಟಿಯೊದರೆ ರೊಟ್ಟಿ ತಿಳ್ಳಗಾದರೆ ದೋಸೆ' ಎಂಬ ತತ್ವವನ್ನು ಚೆನ್ನಾಗಿ ಸಾಧಿಸಿದ್ದೀರಿ. ಬೇರೆ ಒಂದು ಭಾಷ್ಯ ಚೇಷ್ಟೆ ಕತೃಸಹರುಗಳ ಪ್ರಾಂತಗಳಲ್ಲಿ ಸಹ 'ಪ್ರತ್ಯೇಕವಾದಿಗಳ' ಹೋಕಾಟವಿರಲಿಲ್ಲವೆಂದು ಹೇಗೆ ಹೇಳುತ್ತೀರಿ? ಅಲ್ಲಿಯ ವಿಕೇಂದ್ರೀಕರಣವಾದಿಗಳು ವಿನಾದರೂ ತಮಗೆ ತಿಳಿಸಿದರೋ? ಪ್ರತ್ಯೇಕವಾದದಲ್ಲಿ ತಂಬಿಕೆ ಇರುವವರೆಲ್ಲಾ ತಿಳಿಗೇಡಿಗಳೇ? ನಿಮ್ಮ ವಾಃಖವೇ ನಿಮಗೆ ಕನ್ನಡಿಯಲ್ಲಿ ಕಾಣುವುದು. ಇನ್ನೊಬ್ಬರದಲ್ಲ. ಕೊಚ್ಚೆ-ತಿರುಪಾಕೂತು ವಿಲಂಬದ ಲಾಭ ವಷ್ಟೆ ಪತ್ರಿಕೆಯಲ್ಲಿ ಓದಿದ್ದಿರಾ? ಜೊಡ್ಡ ವಿಷಯ ಚಿಕ್ಕ ವಿಷಯವನ್ನು ತಿನ್ನುತ್ತದೆ. ಸ್ವಾತಂತ್ರ್ಯ ಸಿಕ್ಕಿಯೂ ಬ್ರಿಟಿಷರ ಸೈನ್ಯ ಕವಿಮಿಸಲ್ ಹೊಗಳುತ್ತೀರಾ? ಭಾಷಾವಾರು ಪ್ರಾಂತರ ಜನ್ಮ ಆಗಲೂ ಬಹುದು. ಆದರೆ ಕೊಡಗು ಪ್ರತ್ಯೇಕ ಇರಲೂ ಬಹುದು— ಇಲ್ಲಿ ಎಷ್ಟಲು ನೀವು ಏನು 'ಕಜೆ' ಹೇಳುತ್ತಿರೋ? ನಿಮ್ಮ ತಲ್ಪೆ ಏನೆಂದು ಕೇಳುತ್ತೀರೋ? ಒಂದೇ ಶಬ್ದದ ಉತ್ತರ 'ದೇಶ ದ್ರೋಹ' ನಿಮ್ಮ ದೇಶವಷ್ಟನ್ನು, ನಿಮಗೇ ಆಳಲು ಸಾಧ್ಯವಿಲ್ಲದ್ದರಿಂದ ಇತರರಿಗೆ, ಮುಂದಕ್ಕೆ ಬರುವ ಲಾಭಕ್ಕೆ ಮೂರಿ ಬಿಡುವಷ್ಟು, ಅಷ್ಟೆ! ನಿಮ್ಮಂಥವರೇ ಕೊಡಗು ರಾಜರು ಆಳಿ ಹೋಗುವ ಕಾಲಕ್ಕೆ, ತಾನಾಗಿ ಸಿಕ್ಕಿದ ಸ್ವಾತಂತ್ರ್ಯವನ್ನು ಜಾಗೀರು—ಳುಬಳಿಗೆ ಮಾರಿದವರು. ಶ್ರೀ ಸಿ. ಎಂ ಪೂಣಚ್ಚನವರು ಸಂಯೋಜನಾವಾದಿ ಮುಂದಾಳೆಂದು ನಿಮ್ಮ ಬಾತ್ಮಿಯಲ್ಲಿ ಬರೆದಿದ್ದೀರಿ. ಪತ್ರಿಕೆಯಲ್ಲಿಯೂ, ಪಬ್ಲಿಕ್‌ನಲ್ಲಿಯೂ, ಡೆಲ್ಲಿ ಕಾನ್‌ಫರೆನ್ಸ್‌ನಲ್ಲಿಯೂ ತಾವು ಸಂಯೋಜನಾವಾದಿಯೆಂದು ಅವರು ಹೇಳಲ್ಲ. ಒಳಗೊಳಗೇ ವಿಕೇಂದ್ರೀಕರಣವಾದಿಗಳೊಂದಿಗೆ ಓಡಾಡುತ್ತಿದ್ದಾರೆ ಅಷ್ಟೆ. ಹೆಲ್ಲಿಯಲ್ಲಿ ಅವರು ಮೇವನ್ನಾರಿಗೆ ಕೊಟ್ಟ ಜವಾಬು ಗೊತ್ತಿದೆಯೇ? ಪ್ರತಿಯೊಬ್ಬ ಮುಂದಾಳಿಗೆ ಹಲವು ಜನ ಹಿಂದಾಳುಗಳು ಇದ್ದಾರೆ. ಶ್ರೀ ಬೆಳ್ಯಪ್ಪನವರು ಅವರ ಅಭಿಪ್ರಾಯ ಕೇಳದೆ, ಇಷ್ಟ ಬಂದ ಹಾಗೆ ಶ್ರೀ. ಸೊಮಣ ಮತ್ತು ಮಲ್ಲಪ್ಪನವರು ಕೊಟ್ಟ ಹುಸುಂಪಂತೆ ಕುಣಿದರೆ ಅದು ಮಡಿಕೇರಿ ಕಾಂಗ್ರೆಸ್ಸಿನಲ್ಲಿ ಕೊಡಗು ಎಡ್ಜಾಕೆ ಕಾಂಗ್ರೆಸು ಸಮಿತಿ, ಕೊಡಗಿನ ಜನರನ್ನು ಯೂ ಓಟರನ್ನು ಕೇಳದೆ, ದೇಶಪನ್ನು ಸಂಯೋಜನೆ ಮಾಡಬೇಕೆಂದು ತೀರ್ಮಾನಿಸಿಕೊಂಡು', ಅದನ್ನು ಡೆಲ್ಲಿಯವರಿಗೆ ಕೊಂಬು ಊದಿದಂತೆ ಆಗಬಹುದು. ನಿಮಗೆ ಸಾಧ್ಯವಿದ್ದರೆ ಶ್ರೀ. ಬೆಳ್ಯಪ್ಪನವರಿಗೆ ರಾಜಕೀಯ ಪಾಠ ಹೇಳಿ ಕೊಡಿ. 'ನಮ್ಮ ಕಾಲೊಳು ನಾವು ನೀವಾದವು ನಮಗೆ ಹಿತ ಕರವಲ್ಲವೇ?' ಈ ಪದ್ಯ ಕೇಳಿದ್ದೀರಾ? ನುನೆಯುವಳನ್ನು ಮದಿತು ವೈಸೂರು, ಬೆಂಗಳೂರು, ಹುಬ್ಬಳ್ಳಿ ಮತ್ತು ಧಾರವಾಡದ ಬೆಡಗಿನ ಹೆಣ್ಣಿಗೆ ಮನಸೋತಿರಾ? 'ಹೂರಣ ಬೆಟ್ಟ ನುಣ್ಣಗೆ' ಮರೆಯಬೇಡಿ! ಸದ್ಯದ ವಿಚಾರ ಬರೆಯಿರಿ. ಭವಿಷ್ಯ ಅಕ್ಷರಲಿ, ನಾಳೆ ಏನಾಗುವದೆಂದು ಹೇಳಲು ಸಾಧ್ಯವಿಲ್ಲ.

ಬರುವ ಚುನಾವಣೆಗೆ ನಿಂತ ಮೇಧಾವಿಗಳನ್ನೂ ಮತ್ತು ಏಜೆಂಟರ್‌ವಂತರನ್ನೂ ಒಟರುಗಳು ನೀವು ಕೊಡಗು ದೇಶದ ವಿಕೇಂದ್ರೀಕರಣಕ್ಕೆ ಓಟು ಮಾಡುತ್ತಿರೋ ಯಾ ಪ್ರತ್ಯೇಕಕ್ಕೋ? ಎಂಬು ಸವಾಲು ಕೇಳಿಯೇ ಕೇಳುತ್ತಾರೆ. ಇಲ್ಲದಿದ್ದರೆ ದೇಶದ ಅಭಿಪ್ರಾಯವೇ ಪಕ್ಷ ಅಭಿಪ್ರಾಯವೆಂದು ಕಳೆದ ಸಾರಿ ಓಟು ಪಡೆದು, ದ್ರೋಹ ಮಾಡಿದ ಮಾನ್ಯ ಮಹನೀಯರಂತೆ ಆಗಬಹುದು.

'ಕೊಡಗು ಕಂಬೆಕ್ಟ್' ಮತ್ತು ಪ್ರಾಂತೀಕ ಸಹಕಾರಿ ಬ್ಯಾಂಕಿನ ಅಡಳಿತ ವಿಚಾರ ಬರೆದಿದ್ದೀರಿ. ಆದರೆ 'ಕೊಡಗು ಕಾಂಗ್ರೆಸ್' ಮತ್ತು ಕೆ. ಪಿ. ಸಿ. ಸಿಯ ವಿಚಾರ ಬರೆಯಲು ಹುರಿತು ಬಿಟ್ಟೀರಾ

'ಯೋಗ್ಯರನ್ನು ಆರಿಸಿ ಕಳುಹಿಸುವ ವದು ಓಟರುಗಳು— ಪ್ರತ್ಯೇಕವಾದಿಗಳಲ್ಲ. ಚೆನ್ನಾಗಿ ತಿಳಿಯಿರಿ. ಪಾರ್ಟಿ ಪಂಗಡಗಳಲ್ಲದೇ ಓಟು ನಡೆಯುವ ದೇಶವೇ ಇಲ್ಲವೆಂದು ಈಗ ತಿಳಿದುಕೊಳ್ಳಿ. 'ದೇಶ ಸೇವೆ, ಜಾತಿ ಸೇವೆ, ಜಪ ಸೇವೆ ಜನಾರ್ಧನ ಸೇವೆ' ಎಂದು ಸ್ವಾರ್ಥಕ್ಕೆ ಇಳಿದು, ಹೆಳ್ಳೆಯವರನ್ನೂ ಬಡ ರೈತರನ್ನೂ ಅವರ ಕಷ್ಟವನ್ನೂ ಮರೆತು, ಪಬ್ಲಿಸಿಟಿಗಾಗಿ ಮೆಂಬರು ಮಹಾಶಯರುಗಳನ್ನೂ ಕೋವುಮಾಡು ಮುಖಂಡರುಗಳನ್ನೂ ಒಟ್ಟು ಓಟರು' ಸಹ ಈ ಚುನಾವಣೆಯಲ್ಲಿ ಗುರ್ತಿಸಿಕೊಳ್ಳಬೇಕು.

ಕಾಲೇಜಿಗಾಗಿ ನಡೆದ ಹೋರಾಟಹ ಫಲಿತಾಂಶ ನೆನಪಿನಲ್ಲಿದೆಯೇ? ಮೊನ್ನೆಂ ಪೇಜ್ ಮೈದಾನ ವಿಷಯಂಗಿಗೆ ಮಾಡಿಕೇರಿಯಿಂದ ಕಾರಿನಲ್ಲಿ ಎಷ್ಟು ಜನ ದಿದಾರಿಗಳು ಬಂದಿರಲಿಲ್ಲ? ಕೊಡಗಿನಲ್ಲಿ ಎರಡು ವರ್ಷದ ಹಿಂದೆಯೇ ಸರ್ಕಾರಿ ಕಾಲೇಜು ತೆರೆದು, ಬಡವರ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ

ಪದೇ ಪದೇ ಪತ್ರಿಕೆಯಲ್ಲಿ ಶ್ರೀ. ಬೆಳ್ಯಪ್ಪನವರನ್ನು ಹೀಯಾಳಿಸಿ ಬರೆಯುವದರಿಂದ 'ಪ್ರತ್ಯೇಕ ವಾದಕ್ಕೆ' ಹೆಚ್ಚು ಸಹಾನುಭೂತಿ ಸಿಕ್ಕುತ್ತದೆ. ಅದರ ಬದಲು ಪತ್ರಿಕೆಯು ಆ ಸ್ಥಳದಲ್ಲಿ ದೇಶ, ವಿದೇಶದ ವಿಚಾರ ಬರೆಯಿರಿ. ಆದರಿಂದ ಚಂದಾದಾರರಿಗೂ ಓದುಗರಿಗೂ ಲಾಭವಾಗಲಿ.

'ಹೊಸ ಓಟರು'

ಗೋಣಿಕೊಪ್ಪಲು ಟೌನ್.

ಕೊಡಗು ಜಿಲ್ಲೆಯಲ್ಲಿ ಸಂತೆಗೆ ಪ್ರಖ್ಯಾತಿ ಹೊಂದಿದ ಪಟ್ಟಣ, ಗೋಣಿಕೊಪ್ಪಲು ಎಂದರೆ ತಪ್ಪಾಗಲಾರದು. ಈ ಪಟ್ಟಣವು ಮಲಬಾರು ಮತ್ತು ಹೈಸೂರು ಪ್ರಾಂತ್ಯಗಳಿಗೆಮಧ್ಯ ಇದ್ದು, ಹೊರ ಪ್ರಾಂತ್ಯದಿಂದ ಇಲ್ಲಿಗೆ ಅಮದಾಗುವಷ್ಟು ಜಿನಸು ವೆಗ್ಗೆರೆ ಸೌಮಾಪಸುಗಳು ಬೇರೆ ಯಾವ ಪಟ್ಟಣಕ್ಕೂ ಆಗುವುದಿಲ್ಲ. ಇದಲ್ಲದೆ ದಪಗಳ ವ್ಯಾಪಾರವೂ ಸಹ ಈ ಸಂತೆಯಲ್ಲಿ ನಡೆಯುತ್ತದೆ ಎಂಬ ವಿಷಯವು ಕೊಡಗಿನಲ್ಲಿ ಯಾರಿಗೂ ತಿಳಿಯದ ವಿಚಾರವಲ್ಲ. ಈ ಎಲ್ಲ ಕಾರಣಗಳಿಂದ ಈ ಸಂತೆಗೆ ಸೇರುವ ಜನ ಸಂಖ್ಯೆ, ನಡೆಯುವ ವ್ಯಾಪಾರ ವಹಿವಾಟು, ಓಡಾಡುತ್ತಿರುವ ಲಾರಿಗಳು, ಸಂತೆಗೆ ಬಂದು ಸೇರಿವ ಎತ್ತಿನ ಗಾಡಿಗಳು ವೀಣಂತಾದೆ ಎಲ್ಲಾ ವಿಚಾರವೆಷ್ಟು ಸ್ಥಳೀಯ ಡಿಸ್ಟ್ರಿಕ್ಟ್ ಬೋರ್ಡ್ ಅಧಿಕಾರಿಗಳಾಗಲೀ, ಸರಕಾರ ಉದ್ಯೋಗಸ್ಥರಾಗಲೀ ಸರಿಯೆ ಇರುಗುವ ದಿವಸವೇ ಬಂದು ರೂಢಿ ರೂಬು ನೋಡಿರಲೂ ಬಹುದೇ. ಮತ್ತು ಸಂತೆಯ ಅನುಭವ ಪಟ್ಟಿರಲೂ ಬಹುದು. ಈ ಪಟ್ಟಣಲ್ಲಿ ಜರುಗುವ ಸಂತೆಯಿಂದ ಡಿಸ್ಟ್ರಿಕ್ಟ್ ಬೋರ್ಡಿಗೂ, ಸರಕಾರಕ್ಕೂ ವರ್ಷಂಪ್ರತಿ ಎಷ್ಟು ಆದಾಯ ಬರುತ್ತಿದೆ ಎಂಬ ವಿಚಾರ ಸಂಬಂಧಿಸಿ ಅಧಿಕಾರಿಗಳಿಗೆ ತಿಳಿದೇ ಇದೆ. ಇದಲ್ಲದೆ ಈ ಪಟ್ಟಣಕ್ಕಾಗಿ ಹಾಕು ಹೋಗುವಂತ ಸ್ಥಾಧಾರಣ ೩೦ ಬಸ್ಸು ಲೈಸನ್ಸುಗಳವೆ ಮತ್ತು ಇಷ್ಟಿಂಚ ಅಕ್ಕಿ ಗಿರಣಿಗಳಿವೆ.

ಈ ಪಟ್ಟಣವು ವ್ಯಾಪಾರ ದೃಷ್ಟಿಯಿಂದ ಇಷ್ಟರ ಮಟ್ಟಿಗೆ ಮುಂದುವರಿದಿದ್ದರೂ, ಇದಕ್ಕೆ ಸರಕಾರದಿಂದಾಗಲೀ, ಡಿ ಬೋರ್ಡಿನಿಂದಾಗಲೀ ಯಾವದೇ ರೀತಿಯ ಸಹಾಧಾರಣೆ ಇಷ್ಟೂ ದೊರೆಯೆಲಿಲ್ಲ ಎಂಬ ವಿಚಾರವು ಬಹಳ ಶೋಚನೀಯವಾಗಿದ್ದು. ಕಳೆದ ವರ್ಷ ಹೆಜರಿತ್ ಚೇಫ್ ಕವಿಮಿಷನರ್ ಸಾಹೇಬರವರು ಬೇಂಕ್ ತೆರೆಯುವ ಸಮಾರಂಭಕ್ಕೆ ಗೋಣಿಕೊಪ್ಪಲಿಗೆ ದಯಮಾಡಿಸಿದ್ದಾಗ ಈ ಟೌನ್ ಮೂರ್ತಿಟ್ಟ ಫಲ್ಲಿರುವ ಹುಲ್ಲಿನ ಗುಡಿಸಲುಗಳನ್ನೆಲಾ ನೋಡಿ ವ್ಯಸನಪಟ್ಟದ್ದಲ್ಲದೆ, ಈ ಪಟ್ಟಣಕ್ಕೆ ಸರಿಯಾದ ಸೌಧಾರಣೆ ಆದಷ್ಟು ಬೇಗನೆ ಆಗಬೇಕು. ಸದ್ಯಕ್ಕೆ 'ಸೋಟಬೈಡ್' ಏರಿಯಾವನ್ನಾಗಲೀ ಮಾಡಿಸಿ, ಅದರ ಮೂಲಕ ಕೆಲಸ ಮಾಡಿಸಬೇಕೆಂದು ಹೇಳಿದರು. ಆದರೆ ಇದು ಕಳೆಪು, ಒಂದು ವರ್ಷವಾದರೂ ಈ ಪಟ್ಟಣದಲ್ಲಿ ಒಂದು ಪಂಚಾಯಿತಿ ಬೋರ್ಡಾಗಲೀ, 'ಸೋಟಬೈಡ್' ಏರ್ಯಾವಾಗಲೀ ಕಡೆಗೆ ಒಂದು ಬಸ್ ಸ್ಟೇಂಡಾಗಲೀ ಈ ಪಟ್ಟಣದಲ್ಲಿ ಇಲ್ಲ. ಶಂದೆ, ತಾಯಿಗಳಿಲ್ಲದ ತಬ್ಬಲಿಯು ಹಾಗೆ ಸಾಧಾರಣ ೫೦ ವರ್ಷಗಳ ಹಿಂದೆ ಈ ಟೌನ್ ಯಾವ ರೀತಿಯಲ್ಲಿತ್ತೋ, ಅದೇ ರೀತಿ ಇಂದು ಸಹ ತಬ್ಬಲಿಯಾಗಿ ಮೂಲೆಯಲ್ಲಿದೆ. ದೇಸಿಗೆ ಕಾಲದಲ್ಲಿ ಎಂದಕೆ

ಭತ್ತ ಕಿತ್ತಳೆ ಪಹಿಪಾಟಿನ ಸಮಯದಲ್ಲಿ ಲಾರಿ, ಜಸ್ಸು, ವಾಹನ ಓಡಾಟದ ಮಧ್ಯ ಜನರು ರಸ್ತೆಯಲ್ಲಿ ತಡೆದುಕೊಂಡು ಹೋಗುವುದು ಬಹಳ ಕಷ್ಟವಾಗಿ ತೋರುತ್ತೆ. ಆದುದರಿಂದ ಪಾಹೆಪಗಳು ಬಂದು ಫಿಲ್ಲುವ ಒಂದು ನಿಲ್ದಾಣವನ್ನಾದರೂ ಅಧಿಕಾರಿಗಳು ಕಲ್ಪಿಸಿಕೊಟ್ಟಿದ್ದರೆ ಬಹಳ ಉಪಕಾರವಾಗುತ್ತಿತ್ತು.

ಈಗಿನ ನಾಗರೀಕ ದೃಷ್ಟಿಯನ್ನು, ಈ ಟೌನಿನ ಉಷ್ಣತೆಯ ಸ್ಥಿತಿಯನ್ನೂ, ಆಲೋಚಿಸಿ, ಸಮ್ಮಂಧಿಸಿದ ಅಧಿಕಾರಿಗಳು, ಈ ಟೌನಿಗೆ ಒಂದು ಪಂಚಾಯಿತ್ ಬೋರ್ಡನ್ನಾಗಲೀ, 'ಫೋಟೆಫೈಡ್' ಏರಿಯವನ್ನಾಗಿಯಾಗಲೀ ಅದಷ್ಟುಬೇಗನೆ ಮಾಡಿ ಇದಕ್ಕೆ ಒಂದು ವಿಧದ ಸುಧಾರಣೆಯನ್ನು ತರಬೇಕಿದೆ. "ಪಟ್ಟಣಿಗ"

ಇದು ಸರಿಯೇ?

ವ್ಯವಸಾಯ ಇಲಾಖೆಯು ಮೇಲಧಿಕಾರಿಗಳೇ ದಯವಿಟ್ಟು ರೈತಾಪಳಿಗೆ ಸಂಬಂಪಿಸಬೇಡಿ. ನೀವು ಆಗಿಂದಾಗ್ಗೆ ಹಸ್ತ ಪತ್ರಿಕೆಗಳನ್ನೂ, ಪೇಪರಿನಲ್ಲಿ ಲೇಖನಗಳನ್ನೂ ಪ್ರಕಟಿಸುತ್ತೀರಿ, ಮೇಲಧಿಕಾರಿಗಳನ್ನು ಮೆಚ್ಚಿಸುವ ಉದ್ದಿಶ್ಯವಲ್ಲದೆ ಹೆಚ್ಚಿನ ಪ್ರಯೋಜನ ಇದರಿಂದ ಕಂಡು ಬರುವುದಿಲ್ಲ. ನಮ್ಮ ನೆರೆ ಪ್ರಾಂತ್ಯಪಾದ ಮದ್ರಾಸು ಅಧಿಪತ್ಯದಲ್ಲಿ ಕಳೆದ ಆರಂಭಕ್ಕೆ ರೈತರಿಗೆ ೨೦೭೬ ಟನ್ ಅಮೋನಿಯಂ ಸಲ್ಫೇಟನ್ನೂ ೩೦೭ ಟನ್ ಸೂಪರನ್ನು ಒಂದು ಸಣ್ಣ ಡಿಸ್ಟ್ರಿಕ್ಟಿಗೆ ಸಾಲದ ರೂಪವಾಗಿ ಅಲ್ಲಿಯ ಕೃಷಿ ಇಲಾಖೆಯವರು ಹಂಚಿಹ್ಹಾರೆಂದು ಅಲ್ಲಿಯ ಆಫೀಸರರು ಬರೆದ ಒಂದು ಟಿಪ್ಪಣಿಯಿಂದ ತಿಳಿದು ಬಂದಿದೆ. ಕೊಡಗಿನಲ್ಲಿ ಇದು ಸಾಧ್ಯವಿಲ್ಲವೇ? ಕೊಡಗಿನಲ್ಲಿ ಗೊಬ್ಬರವನ್ನು ಸೊಸೈಟಿಯಮುಖಾಂತರ ಹಂಚಲಿಕ್ಕೆ ನಿಮಗೆ ಸಾಧ್ಯವಿರಲಿಲ್ಲವೋ? ನಿಮ್ಮ ಅಧಿಕಾರದಲ್ಲಿ ರೈತರಿಗೆ ಸಾಲದ ರೂಪದಲ್ಲಿ ಗೊಬ್ಬರವನ್ನು ಮತ್ತು ಹತ್ಯಾರುಗಳನ್ನು ಎಸ್ಟೆಷ್ಟು ಬೆಲೆ ಬಾಳುವ ಸರಕನ್ನು ಹಂಚಿರುತ್ತೀರಿ? ನೀವು ತರಿಸಿದ ನೀರು ಎಳೆಯುವ ಎಂಜಿನು ಈ ವರ್ಷ ಎಷ್ಟು ಮಂದಿ ರೈತರ ಕೆಲಸಕ್ಕೆ ಫಲಕಾರಿಯಾಗಿದೆ. ಕಳೆದ ವರ್ಷ ತರಿಸಿದ ಎಷ್ಟು ಚೀಲ ರಸಾಯನಗೊಬ್ಬರ ಶ್ರೀಮಂಗಲದಲ್ಲಿಯೂ ಮತ್ತು ಕುಟ್ಟದಲ್ಲಿಯೂ ಬಾಕಿಯಾಗಿತ್ತು? T. K. C.

ವಿಚಾರಿಸುವರೇ?

ತಾರೀಕು ೨೧ರ 'ಕೊಡಗು' ಪತ್ರಿಕೆಯು ಭಾಗಮಂಡಲದಲ್ಲಿರುವ ನನಗೆ ತಾ. ೨೬ರ ವರೆಗೂ ದೊರಕಿರುವದಿಲ್ಲ. ಕೆಲವು ನೇಳೆ ಪತ್ರಗಳೂ, ಪತ್ರಿಕೆಗಳೂ ಹದಿನೈದು ದಿನಗಳ ನಂತರ ಬರುವದಿದೆ. ಕೆಲವು ಸೇಳೆ ನೆರೆಯವರು ಒಡೆದು ಓದಲ್ಪಟ್ಟ ಪತ್ರಿಕೆಗಳನ್ನು ತಂದುಕೊಡುವರು. ಪೋಸ್ಟ್‌ಮ್ಯಾನರಿಂದ ನೇರವಾಗಿ ಕೈಸೇರದೆ ನೂರಪ್ಪೆಯವರ ಮೂಲಕ ಬರುವ ಈ ಪತ್ರಿಕೆಗಳು ನಜ್ಜುಗುಜ್ಜಾಗಿ, ಅಕ್ಷರ ಕಾಣದಷ್ಟು ಹಾಳಾಗಿರುತ್ತವೆ. ಈ ರೀತಿ ಅವ್ಯವಸ್ಥೆ ಯಾರಿಂದ ಆಗುತ್ತಿದೆ? ಪೋಸ್ಟಲ್ ಇಲಾಖೆಯವರು ಇದನ್ನು ವಿಚಾರಿಸಿ ಎಚ್ಚರಿಸಬೇಡವೇ?

'ಭಾಗಮಂಡಲದವ'

ಆದರೆ-ರೈತರು ಕೂಲಿಕಾರರೆಲ್ಲಿ?

ಇದೀಗ ಜನಸಾಮಾನ್ಯದ ಅಭಿಪ್ರಾಯವನ್ನು ಪ್ರತಿನಿಧಿಸಲಿಕ್ಕೆ ಕಾಂಗ್ರೆಸ್ಸು, ಪ್ರಜಾ, ಸೋಷಲಿಸ್ಟ್, ಕಮ್ಯೂನಿಸ್ಟ ಮತ್ತು ಉಳಿದ ಪಕ್ಷಗಳು ಅಹಮಹಮಿಕೆಯಿಂದ ಸ್ಪರ್ಧಿಸುತ್ತಿವೆ. ಆದರೆ ರೈತರು ಮತ್ತು ಕೂಲಿಕಾರರೆಲ್ಲಿರುವರು ಆ ಧೂರೀಣರಲ್ಲಿ? ಈ ಧೂರೀಣರಾದರೋ, ನೇಗಿಲು, ಗುದಿಸಲು, ಗಿಡ ಮತ್ತು ಅಕಳುಗಳ ಚಿಪ್ಪೆಗಳನ್ನು ಚುನಾವಣೆಗಾಗಿ ಅರಿಸಿಕೊಂಡಿರುವರು. ಆದರೆ ಅವರಲ್ಲಿ ಒಬ್ಬರಿಗಾದರೂ ಹೇಗಿಲು ಹೊಡೆಯಲು ಬರುವುದೇ? ಒಬ್ಬನಾದರೂ ಗುದಿಸಲಿವಲ್ಲಿ ವಾಸಿಸುವವನೇ? ಒಬ್ಬನಾದರೂ ಗಿಡವನ್ನು ಳಿಸಬಲ್ಲನೆ? ಒಬ್ಬನಿಗಾದರೂ ಅಕಳನ್ನು ಹಿಂಡುವದು ಗೊತ್ತಿಹೆಯೆ? ಯಾರೊಬ್ಬರಿಗೂ ಈ ಕಲೆ ಗೊತ್ತಿಲ್ಲೆಂದು ನನ್ನ ಊಹೆ.

ನಮ್ಮ ಪ್ರಜಾಪ್ರಭುತ್ವದ ಇಪೆಂತಹ ಫಾರ್ಸ್! ನಮ್ಮದೊಂದೇ ಏಕೆ ಎಲ್ಲ ಪ್ರಜಾ ಪ್ರಭುತ್ವಗಳಿಗಳಾ ಇದು ಅನ್ವಯಿಸುವದು.

ಈ ಪಕ್ಷಗಳವರು ಹೊರಡಿಸಿಪ ಜುನಾವಣೆ ಘೋಷಣಾ ಪತ್ರಿಕೆಗಳಲ್ಲಿ ಬಾಪೂರವರ ಕ್ರಾಂತಿಕಾರಕ ಕಾರ್ಯಕ್ರಮಗಳಿಗೆ ಸರಿಹೋಗುವ ಯಾವವಾದರೂ ಕಾರ್ಯಕ್ರಮಗಳಿವೆಯೇ? ಗಾಂಧೀಜಿಯವರು ತಮ್ಮ ಕೊನೆಯ ದಿನಗಳಲ್ಲಿ ದಿಲ್ಲಿಯಲ್ಲಿದ್ದಾಗ ಪ್ರಾರ್ಥನೋತ್ತರ ಭಾಷಣಗಳಲ್ಲಿ ಮೂಕಾಡಿದ್ದನ್ನು ನಾವೆಲ್ಲ ನೆನೆದಿರುವೆವೋ? ೧೯೪೪ರ ಜನವರಿ ೨೯ನೆ ಸಾಯಂಕಾಲ ಕೊನೆಯ ಸಾರ್ವಜನಿಕ ಭಾಷಣದಲ್ಲಿ ಅವರು ಈ ಮಾತನ್ನು ಮತ್ತೆ ಮತ್ತೆ ಜೋರು ಕೊಟ್ಟು ಹೇಳಿದ್ದಂಟು. ನವಜೀವನ ಕಾರ್ಯಾಲಯದವರು ಪ್ರಸಿದ್ಧಿಸಿದ ದಿಲ್ಲಿ ದಿನಚರಿಯಲ್ಲಿಯು ಬಾಪೂ ಭಾಷಣದ ವರದಿಯನ್ನು ಇಲ್ಲಿ ಕೊಡುತ್ತೇನೆ.

"ನಮ್ಮ, ಭಾರತದ ಪ್ರಧಾನ ಮಂತ್ರಿಗಳು ಬಹಳ ವಿದ್ವಾಂಸರು, ಶ್ರೇಷ್ಠ ಇತಿಹಾಸಕಾರರು ಮತ್ತು ಒಳ್ಳೆ ಲೇಖಕರು ಇರುವರು. ಆದರೆ ಅವರಿಗೆ ಒಕ್ಕಲುತನ ಮತ್ತು ಉಳುವದು ಮುಂತಾದ್ದೇನೂ ಗೊತ್ತಿರುವದಿಲ್ಲ. ಉಳಿದ ಮಂತ್ರಿಗಳೆಲ್ಲ ಶ್ರೀಮಂತರಿರುವರು. ಅವರಲ್ಲಿ ಯಾರೂ ಹೊಲಗಳಲ್ಲಿ ಎಂದೂ ಕೆಲಸ ಮಾಡಿಲ್ಲ. ಹೀಗಿದ್ದರೂ ಭಾರತದಲ್ಲಿ ನಿಂಕ್ಕೆ ಲಂಧ ಷ್ಟು ಜನರು ಒಕ್ಕಲಿಗರಿರುವರು ಒಕ್ಕಲಿಗನಿಗೆ ಮಾತ್ರ ಉತ್ಪಾದನೆಯನ್ನು ಹೇಗೆ ಹೆಚ್ಚಿಸಬೇಕೆಂಬುದು ಗೊತ್ತು. ಭೂಮಿಯ ಫಲವತ್ತತೆಯ ಪರಿಜ್ಞಾನವೂ ಅವನಿಗೇ ಇದೆ. ಒಕ್ಕಲಿಗರು ಹೇಗೆ ಮತ್ತು ಯಾವ ಮಾರ್ಗದಿಂದ ಲಾಭ ಮಾಡಿಕೊಳ್ಳಬಲ್ಲರು ಮತ್ತು ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬಲ್ಲರೆಂಬುದು ಅವರಿಗೆ ಗೊತ್ತು. ಪ್ರಜಾಪ್ರಭುತ್ವದಲ್ಲಿ ಒಕ್ಕಲಿಗನೇ ಅಡಳಿತಗಾರನಾಗತಕ್ಕದ್ದು. (ಪ್ರಾಮಾಣಿಕ ಮತ್ತು ಸಮರ್ಥ ಒಕ್ಕಲಿಗನನ್ನು ಮಂತ್ರಿಯಕ್ಕೆ ತರಲು ಗಾಂಧೀಜಿಯು ಪಟ್ಟಾಪೆ.) ಈಥ ಒಕ್ಕಲಿಗನಿಗೆ ಇಂಗ್ಲಿಷ್ ಭಾಷೆಯು ಜ್ಞಾನವಿಲ್ಲ. ಜವಹರಲಾಲಜಿಯವರಿಗೆ ಅವನ ಕಾರ್ಯಾಡಚರಿಗಳಾಗಲೂ ನಾನು ಕೇಳುತ್ತೇನೆ; ಅವರಂ ಪರರಾಷ್ಟ್ರ ರಾಜಕಾರಣ ಖಾತೆಯನ್ನು ಅವರ ಪರವಾಗಿ ನಿರ್ವಹಿಸಿಕೊಳ್ಳಬೇಕು. ಮತ್ತು ಅಂಥ ಸೇವೆಯಲ್ಲಿ ಅಭಿಮಾನ ತಳೆಯಬೇಕು. ಇಂಥ ಒಕ್ಕಲಿಗ ಪ್ರಧಾನ ಮಂತ್ರಿಯು ವಾಸಿಸಲು ಅರಮನೆಯನ್ನು ಕೇಳಲಾರ. ಪಣ್ಣಿಪ ಗುದಿಸಲಿನಲ್ಲಿ ವಾಸಿಸಿ ಭೂಮಿಯ ಮೇಲೆ ಮಲಗಿ ತನಗೆ ಕೆಲಸಕಾಲ್ಲಿಪಾಗೆಲ್ಲ ಹೊಲದಲ್ಲಿ ಕೆಲಸ ಮಾಡುವನು— ಇಡಿ ಚಿತ್ರವೇ ಕೂಡಲೆ ಜಡಹಾವಣೆ ಹೊಂಹುವದು. ಪಂಚಾಯತ ರಾಜ್ಯದಲ್ಲಿ ಭಾರತದಲ್ಲಿ ಎಲ್ಲರಿಗಿಂತ ಪ್ರಸಿದ್ಧ ವ್ಯಕ್ತಿಯೆಂದರೆ ಸ್ವಾಭಾವಿಕವಾಗಿ ಒಕ್ಕಲಿಗನು."

(೨೬-೧೧-೧೯೪೭)

"ನನಗೇನಾದರೂ ಆಯ್ಕೆಯು ಸಂಬಂಧದಲ್ಲಿ ಹೇಳುವ ಅಧಿಕಾರವಿದ್ದರೆ ಗವರ್ನರ್ ಜನರಲ್‌ರನ್ನು ಮತ್ತು ಪ್ರಧಾನ ಮಂತ್ರಿಗಳನ್ನು ಒಕ್ಕಲಿಗನೊಳಗಿಂದಲೇ ಆರಿಸಬೇಕೆಂದು ಹೇಳುತ್ತೇನೆ. ಒಕ್ಕಲಿಗರು ಭೂಮಾತೆಯ ರಾಜ್ಯದ ವಾರೀಸ್‌ದಾರರು ಎಂಬುವುದಕ್ಕೆ ಸಣ್ಣಪನಿರುವಾಗ ಶಾಲೆಯ ಪಠ್ಯಪುಸ್ತಕಗಳಲ್ಲಿ ನಾವು ಓದಿದ್ದುಂಟೇ. ಹೊಲದಲ್ಲಿ ಕೆಲಸ ಮಾಡಿ ತಾವು ಬೆಳೆದದ್ದನ್ನೇ ತಿನ್ನುವಂಥವರಿಗೆ ಮಾತ್ರ ಇದು ಅನ್ವಯಿಸುತ್ತದೆ. ಇಂಥ ಒಕ್ಕಲಿಗರು ಈ ಉನ್ನತ ಸ್ಥಾನಕ್ಕೆ ಅರ್ಹರಾಗಬೇಕಾದರೆ ಅನಕ್ಷರಸ್ಥರಾಗಿರಬಹುದು. ಆದರೆ ಅವರಲ್ಲಿ ತೀಕ್ಷ್ಣವಾದ ವ್ಯವಹಾರಜ್ಞಾನ, ವೈಯಕ್ತಿಕ ಶೌರ್ಯ, ನಿಶ್ಚಲ ಪ್ರಾಮಾಣಿಕತೆ ಮತ್ತು ಸಂಶಯಾತೀತ ದೇಶಾಭಿಮಾನ ಇದ್ದರೆ ಸಾಕು. ನಿಜವಾದ ಸಂಪದುತ್ಪಾದಕರಾದ ಅವರು ನಿಶ್ಚಯವಾಗಿ ಒಡೆಯರೆ. ನಾವು ಹೊತ್ರ ಅಪರನ್ನು ಗುಲಾಮರನ್ನಾಗಿ ಮಾಡಿದ್ದೇವೆ.

(೨೯-೧-೧೯೪೮)

ಯಾವುದಾದರೂ ಪಕ್ಷವು ಧೈರ್ಯದಿಂದ ಮುಂದೆ ಬಂದು ಈಗಲಾದರೂ ಪ್ರಧಾನ ಮಂತ್ರಿತ್ವವನ್ನೊಳಗೊಂಡ ತನ್ನ ಮಂತ್ರಿ ಮಂಡಳದಲ್ಲಿ ಸಮರ್ಥ ಒಕ್ಕಲಿಗರಿಗೆ ಸ್ಥಾನ ಕೊಡುತ್ತೇವೆಂದು ತಮ್ಮ ಘೋಷಣಾ ಪತ್ರದಲ್ಲಿ ಸಾರಲಿ—ಯೋಗ್ಯ ದಿಶೆಯಲ್ಲಿ ಇಟ್ಟ ಮಹತ್ವದ ಮೊದಲನೇ ಹೆಜ್ಜೆ ಆಗಾಗುವದು. ಅನಂತರ ಯಾರೂ ಅಡಚಣೆಯಲ್ಲಿ ಪಾಸಿಸಲಾರರು. ಭಾರೀ ಸಂಬಳದ ಮಂತ್ರಿಗಳು ಇರಲಾರರು. ಹೆಚ್ಚು ಸಂಬಳದ ಸರಕಾರೀ ಅಧಿಕಾರಿಗಳೂ ಇರಲಾರರು, ನಿಷ್ಪ್ರಯೋಜಕ ಭಾರೀ ವೆಚ್ಚದ ಸರಕಾರೀ ಶಾಖೆಗಳೂ ಉಳಿಯವು. ಗಾಂಧೀಜಿ ಹೇಳಿದಂತೆ ಇಡೀ ಚಿತ್ರವು ಕೂಡಲೇ ಬದಲಾವಣೆ ಹೊಂದಿದಂತಾಗುವದು.

ಓ! ಇಂಥಾ ಧೈರ್ಯದ ಕ್ರಾಂತಿಗೆ ಆದಾರು ಮುಂದೆ ಬಂದು ಗಾಂಧೀಜಿಯು ಬಯಸಿದ ಕಾರ್ಯಕ್ರಮಗಳನ್ನು ಜಾರಿಯೆಲ್ಲಿ ತರಬಲ್ಲರು? ಹಿಂದೊಮ್ಮೆ ವೈಭವ ಶಿಖರವನ್ನು ಮುಟ್ಟಿ ಇದೀಗ ರಸಾತಲಕ್ಕಿಳಿದ ಈ ದುರ್ದೈವೀ ನಾಡಿನಲ್ಲಿ ಮತ್ತೆ ನವಜೀವನದ ಸಂಚಾರವಾಗಿ ಅದು ಸನ್ಮಾನ್ಯ ಸ್ಥಾನವನ್ನು ಪಡೆಯಬೇಕಾದರೆ ಇದರ ಹೊರತು ಬೇರೆ ಯಾವ ಮಾರ್ಗವೂ ಇರುವುದಿಲ್ಲ.

— ವೀರಾ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪೈಮಾಡುವ ಪಂಪುಗಳು (Spraying Pumps)
7. ¾" ½" ⅜" ¼" ⅛" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-2

Edited Printed and Published by P. I. Belliappa at 'Kodagu' Press, Mercara, for 'Kodagu' Ltd.